**AKSHARASURYA**
Peer-Reviewed, Multi Lingual E-Journal
Volume – 01, Issue – 03, December 2022.

# ತುಳು ಜನಪದ ಶಿಶುಪ್ರಾಸಗಳು ಒಂದು ಅಧ್ಯಯನ

**ಡಾ. ಆಶಾಲತ ಸಿ.ಕೆ.**
ಸಹಾಯಕ ಪ್ರಾಧ್ಯಾಪಕಿ
ಸರಕಾರಿ ಕಾಲೇಜು, ಕಾಸರಗೋಡು.
ashasaliannellikunje@gmail.com

**ಪ್ರಸ್ತಾವನೆ:**

ಜನಪದ ಪ್ರಧಾನ ವರ್ಗವಾಗಿರುವ ಜನಪದ ಸಾಹಿತ್ಯವನ್ನು ಪಾಡ್ದನ, ಕಬಿತ, ಉರಲ್, ಗಾದೆಗಳು, ಕುಣಿತದ ಹಾಡುಗಳು, ಒಗಟುಗಳು, ತಮಾಷೆಯ ಪದಗಳು, ಅಜ್ಜಿ ಕತೆಗಳು, ಐತಿಹ್ಯ ಎಂಬುದಾಗಿ ವಿಂಗಡಿಸಬಹುದು. ಜನಪದ ಸಾಹಿತ್ಯದ ಒಂದು ಪ್ರಕಾರವೇ ಜನಪದ ಶಿಶುಪ್ರಾಸಗಳು ಅಥವಾ ಶಿಶುಗೀತೆಗಳು.

ಮಕ್ಕಳ ಪ್ರಪಂಚ ಹಿರಿಯರ ಪ್ರಪಂಚವಲ್ಲ. ಅದೊಂದು ಪ್ರತ್ಯೇಕ ಲೋಕ. ಆ ಲೋಕದಲ್ಲಿ ಪ್ರಾಣಿ ಪಕ್ಷಿಗಳು, ಬೆಟ್ಟ ಗುಡ್ಡಗಳು, ನದಿ, ಚಂದ್ರ, ಮೋಡ, ಗುಡುಗು, ಮಳೆ ಎಲ್ಲವೂ ಮಕ್ಕಳೊಂದಿಗೆ ಮಾತಾಡುತ್ತವೆ. ಬಗೆ ಬಗೆಯ ಅನುಭವ ಕತೆಗಳನ್ನು ಹೇಳುತ್ತವೆ. ಸುತ್ತಲಿನ ನಿಸರ್ಗ ಮಕ್ಕಳ ಕುತೂಹಲ ತಣಿಸುತ್ತವೆ, ಕಲ್ಪನೆ ಅರಳಿಸುತ್ತವೆ. ಮಕ್ಕಳು ತರ್ಕಬದ್ಧವಾಗಿ ಆಲೋಚಿಸುತ್ತಾರೆ, ಪ್ರಶ್ನಿಸುತ್ತಾರೆ, ಅತಾರ್ಕಿಕವಾಗಿಯೂ ಊಹಿಸುತ್ತಾರೆ. ತಾವೇ ಗೂಡಾಗಿ ಹಕ್ಕಿಯಾಗಿ ಹಾಡುತ್ತಾರೆ. ಇಲ್ಲಿ ಜಟಿಲ ತಾತ್ವಿಕ ಪ್ರಶ್ನೆಗಳಿಗೆ, ನೀರಸ ಜಿಜ್ಞಾಸೆಗೆ ಸ್ಥಾನವಿಲ್ಲ. ಶಿಶುಪ್ರಾಸಗಳು ಸಂಭಾಷಣಾ ರೂಪದಲ್ಲಿದ್ದು ಮಕ್ಕಳು ಇದನ್ನು ಬೇಗನೆ ಕಲಿತುಕೊಳ್ಳುತ್ತಾರೆ.

"ಮಕ್ಕಳಿಂದಲೇ ಹೆಚ್ಚಾಗಿ ರಚಿಸಲ್ಪಟ್ಟ, ಮಾತಾಪಿತೃಗಳಿಂದ ಮಕ್ಕಳಿಗಾಗಿ ಸೃಷ್ಟಿಸಲ್ಪಟ್ಟ ಅರ್ಥಪೂರ್ಣವಾದ, ಅರ್ಥ ರಹಿತವಾದ, ಶಬ್ದ ಚಮತ್ಕಾರವಿರುವ ಅಥವಾ ಇಲ್ಲದಿರುವ ಗೀತಾತ್ಮಕ ಸಾಲುಗಳನ್ನು ಕುರಿತು ಪಾಶ್ಚಾತ್ಯ ಪದವೊಂದರ ಆಧಾರದ ಮೇಲೆ ಕನ್ನಡದಲ್ಲಿ ಅದಕ್ಕೆ ಸಂವಾದಿಯಾದ 'ಶಿಶುಪ್ರಾಸಗಳು' ಎಂಬ ಪದಸೃಷ್ಟಿಯ ಖ್ಯಾತಿ ಡಾ. ಹಾ.ಮಾ. ನಾಯಕ ಅವರಿಗೆ ಸಲ್ಲುತ್ತದೆ." (ಜಾನಪದ ಶಿಶುಪ್ರಾಸಗಳು ಒಂದು ಸಮೀಕ್ಷೆ – ತ.ಚಿ ಚೆಲುವೇಗೌಡ)

ಪ್ರಸ್ತುತ ಪ್ರಬಂಧದಲ್ಲಿ ತುಳು ಜನಪದ ಶಿಶುಪ್ರಾಸಗಳನ್ನಷ್ಟೇ ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ. ಪ್ರಬಂಧದ ಒಳಗೆ ತುಳು ಪಠ್ಯಗಳ ಕನ್ನಡ ಅನುವಾದವನ್ನು ಬಳಸಲಾಗಿದೆ. ತುಳುವಿನ ಮೂಲ ಪಠ್ಯಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಮೂರು ಕನ್ನಡ ಶಿಶುಪ್ರಾಸ ಹಾಗೂ 47 ತುಳು ಶಿಶುಪ್ರಾಸಗಳನ್ನು ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ. ಇವುಗಳನ್ನು ಕ್ಷೇತ್ರಕಾರ್ಯ ಹಾಗೂ ನನಗೆ ಗೊತ್ತಿದ್ದ ಕೆಲವು ಶಿಶುಪ್ರಾಸಗಳನ್ನು ಇಲ್ಲಿ ಬಳಸಿಕೊಂಡಿದ್ದೇನೆ.

ತುಳುವಿನಲ್ಲಿ ಮಕ್ಕಳ ಸಾಹಿತ್ಯವನ್ನು ಮೊತ್ತಮೊದಲು ಸೃಜನಾತ್ಮಕವಾಗಿ ನೀಡಿದವರೆಂದರೆ ಪರ್ಕಳ ಮಾರಪ್ಪ ಶೆಟ್ಟರು (1930). ಪೊರ್ಲಕಂಟ್ ಕವಿತೆಗಳ ಸಂಗ್ರಹವಾಗಿದೆ. ನಾರಾಯಣ ಕಿಲ್ಲೆಯವರ ಪ್ರಮುಖವಾದ ಶಿಶುಸಾಹಿತ್ಯವಾಗಿದೆ. ಅಲ್ಲದೆ ತುಳುಸಿರಿ (1970), ತುಳುಕೂಟ (1979), ತುಳುವ (1980), ತುಳು ನಾಡ್ (1981), ರಾಶಿ (1989), ತುಳುವೆರೆ ತುಡರ್ (1994), ಮದಿಪು (1996) ಮುಂತಾದ ಪತ್ರಿಕೆಗಳು ತುಳು ಶಿಶುಪ್ರಾಸಗಳನ್ನು ಪ್ರಕಟಿಸಿದೆ. ಗಣನಾಥ ಶೆಟ್ಟಿ ಎಕ್ಕಾರು ಸಂಪಾದಕತ್ವದ 'ರಾಶಿ' ತುಳು ಜನಪದ ಪತ್ರಿಕೆಯಲ್ಲಿ ಶಿಶುಪ್ರಾಸಗಳು ಪ್ರಕಟವಾಗುತ್ತಿದ್ದವು. ಪಾಲ್ತಾಡಿಯವರ ಪಚ್ಚೆಕುರಾಲ್ (1987) ಕವನ ಸಂಕಲನದಲ್ಲಿ ತುಳು ಮಕ್ಕಳ ಕವನಗಳಿವೆ. ವಾಮನ ನಂದಾವರರ ಬೀರ (1987) ಸಂಕಲನದಲ್ಲೂ ಮಕ್ಕಳ ಕವಿತೆಗಳಿವೆ.

ಪ್ರಮೋದ ಸುವರ್ಣರ 'ಪದರಂಗಿತ' (1996), ತಾಟಿ ತೆಂಬರೆ (1999) ತುಳು ಶಿಶುಕಾವ್ಯ ಮುಂತಾದವು ಮಕ್ಕಳ ಸಚಿತ್ರ ಕವನ ಸಂಕಲನ. ಅಮೃತ ಸೋಮೇಶ್ವರರು ತುಳು ಬದುಕು (1984) ಕೃತಿಯಲ್ಲಿ ಶಿಶುಸಾಹಿತ್ಯದ ಮುಖ್ಯ ಲಕ್ಷಣಗಳನ್ನು ತಿಳಿಸಿ ತುಳು ಜನಪದ ಸಾಹಿತ್ಯದಲ್ಲಿರುವ ಶಿಶುಪ್ರಾಸಗಳನ್ನು ಮಕ್ಕಳ ಹಾಡುಗಳನ್ನು ಸಂಗ್ರಹಿಸಿ ಅವುಗಳ ಅನುವಾದ, ಅರ್ಥ ವಿಶ್ಲೇಷಣೆ ಮಾಡಿದ್ದಾರೆ. ಡಾ. ಬಿ.ಎ. ವಿವೇಕ ರೈ ತನ್ನ ತುಳು ಜನಪದ ಸಾಹಿತ್ಯ (1985) ಕೃತಿಯಲ್ಲಿ ತಿತ್ತಿರಿತ್ತಿರಿ ಮತ್ತು ಓಡೆಪೋಪ ಕುಂಡಚ್ಚ ಎಂಬ ಎರಡು ಶಿಶುಪ್ರಾಸಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ. 'ಗಿಳಿಸೂವೆ'ಯ ಲೇಖನವೊಂದರಲ್ಲಿ ತೌಲನಿಕವಾಗಿ ತುಳು ಮತ್ತು ಇಂಗ್ಲೀಷಿನ ಶಿಶುಪ್ರಾಸವೊಂದನ್ನು ವಿಶ್ಲೇಷಿಸಿದ್ದಾರೆ. 'ಪೊಲಿ 200' ಇದರಲ್ಲಿ ತುಳು ಶಿಶುಪ್ರಾಸಗಳ ಬಗ್ಗೆ ವಾಮನ ನಂದಾವರರ ಲೇಖನವೊಂದು ಪ್ರಕಟವಾಗಿದೆ. ತುಳು ಜಾನಪದದ ಇತರ ಪ್ರಕಾರಗಳಲ್ಲಿ ನಡೆದ ಅಧ್ಯಯನದ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ತುಳು ಶಿಶುಪ್ರಾಸಗಳ ಅಧ್ಯಯನ ನಡೆದಿದೆ. ಆದರೆ ಕನ್ನಡ ಶಿಶುಪ್ರಾಸಗಳ ಬಗ್ಗೆ ಗಮನಾರ್ಹ ಅಧ್ಯಯನಗಳು ನಡೆದಿವೆ. ಭಾರತೀ ದೇವಿ ಎಂ. ಇವರ "ದಕ್ಷಿಣ ಕನ್ನಡದ ಶಿಶುಗೀತೆಗಳು" ಎಂಬ ಎಂ.ಫಿಲ್ ಪ್ರಬಂಧವು ಕನ್ನಡ ಕವಿಗಳಿಂದ ರಚಿತವಾದ ಶಿಶುಗೀತೆಗಳ ಅಧ್ಯಯನವನ್ನೊಳಗೊಂಡಿದೆ.

ಕನ್ನಡದಲ್ಲಿ ಪಂಜೆ ಮಂಗೇಶರಾಯ, ಕಯ್ಯಾರ ಕಿಞ್ಞಣ್ಣ ರೈ, ಮಂಜೇಶ್ವರ ಗೋವಿಂದ ಪೈ, ಸಿಸು ಸಂಗಮೇಶ, ಬೊಳುವಾರು ಮಹಮ್ಮದ್ ಕುಂಞಿ ಮುಂತಾದ ಪ್ರಮುಖ ಸಾಹಿತಿಗಳು ಶಿಶುಗೀತೆಗಳನ್ನು ರಚಿಸಿದ್ದಾರೆ.

**ಶಿಶುಪ್ರಾಸ–ಲಕ್ಷಣ, ಉದ್ದೇಶ:**

ಶಿಶುಗೀತೆ ಎನ್ನುವ ಪರಿಕಲ್ಪನೆಯೇ ಮಗುವನ್ನು ನೆನಪಿಗೆ ತರುವಂತದು. ಎಳೆಯ ಮಕ್ಕಳ ಸಲುವಾಗಿ ಹಾಡುವ ಹಾಡುಗಳು ಅವರ ಬದುಕಿನೊಳಗಿನ ಪದಗಳನ್ನು ಒಳಗೊಂಡಿವೆ. ಮಕ್ಕಳ ಹಾಡುಗಳಲ್ಲಿ ಇರಬೇಕಾದ ಮೊದಲ ಗುಣವಾದ ಮಾಧುರ್ಯ ಅಥವಾ ಸಂಗೀತ ಗುಣ. ಪಲ್ಲವಿ ಮಕ್ಕಳ ಹಾಡುಗಳಲ್ಲಿರಬೇಕಾದ ಇನ್ನೊಂದು ಉತ್ತಮ ಗುಣ. ಶಿಶುಗೀತೆಗಳು ದೊಡ್ಡವರು, ಮಕ್ಕಳು ತಲೆಮಾರುಗಳಿಂದ ಬಾಯಿಗೆ ಬಾಯಿಗೆ ಹಾದು ಬಂದ ಪರಂಪರಾಗತ ಮೌಖಿಕ ಸಾಹಿತ್ಯವಾಗಿದೆ. ಶಿಶುಪ್ರಾಸಗಳ ಭಾಷೆ ಸರಳ. ಅವುಗಳು ರಾಗಬದ್ಧವಾಗಿರುತ್ತವೆ. ಶಿಶುಗೀತೆಗಳ ಪ್ರಧಾನ ಲಕ್ಷಣ ಸರಳತೆ.

ಕನ್ನಡ ಜಾನಪದ ವಿಶ್ವಕೋಶದಲ್ಲಿ ಶಿಶುಗೀತೆಗಳನ್ನು ಹೀಗೆ ವಿಂಗಡಿಸಿದ್ದಾರೆ. (1) ಆಟದ ಹಾಡುಗಳು (2) ಎಣಿಕೆಯ ಪ್ರಾಸ ಪದಗಳು (3) ಅಣಕದ ಹಾಡುಗಳು, ಛೇಡಿಕೆಯ ಹಾಡುಗಳು (4) ಕಾಲಜ್ಞಾನಗಳು (5) ಮಕ್ಕಳೇ ಹಾಡುವ ಚಾರಿತ್ರಿಕ ಪದ್ಯಗಳು (6) ಪ್ರಾಸಬದ್ಧ ಜ್ಞಾಪಕ ಸೂತ್ರಗಳು ಮತ್ತು (7) ಲಾಲಿಪದಗಳು ಎಂಬುದಾಗಿ ವರ್ಗೀಕರಿಸಿದ್ದಾರೆ.

"ಬೇರೆ ಹಾಡುಗಳನ್ನು ಅವುಗಳ ಛಂದೋಕ್ರಮ, ಲಯಗಾರಿಕೆಯಲ್ಲಿ ಗುರುತಿಸಬಹುದಾದರೆ ಮಕ್ಕಳ ಹಾಡುಗಳನ್ನು ಪ್ರಾಸಗಳಲ್ಲೇ ಗುರುತಿಸಬೇಕು." ಕನ್ನಡ ಜಾನಪದ ವಿಶ್ವಕೋಶ ಸಂ – 2 (ಸಂ) ಚಂದ್ರಶೇಖರ ಕಂಬಾರ.

ಇಂತಹ ಶಿಶುಪ್ರಾಸಗಳು ನಾಲಗೆ ಹೊರಳಲು ಒಂದರಿಂದ ಮೂರು ವರ್ಷದ ಮಕ್ಕಳನ್ನು ಅವರು ಅಳುವಾಗ, ಹಠ ಹಿಡಿಯುವಾಗ ಮಂಗಟಿಸಲು ಬಳಕೆಯಾಗುತ್ತದೆ. ಮಕ್ಕಳ ಕೈಗಳಿಂದ ಚಪ್ಪಾಳೆ ತಟ್ಟಿಸಿ ಅಂಗಾಂಗಗಳ ಮೂಲಕ ಅಭಿನಯ ಮಾಡಿಸಿ ಶರೀರವನ್ನು ಅತ್ತ–ಇತ್ತ ಓಲಾಡಿಸಿ ಹೇಳುವಂತಹ ಅನೇಕ ಶಿಶುಪ್ರಾಸಗಳು ಇವೆ. ಮಕ್ಕಳು ಮಾತು ಕಲಿತು ಆಟವಾಡಲು ತೊಡಗಿದಂದಿನಿಂದಲೇ ಅವರ ಆಟಪಾಠಗಳ ಜೊತೆಯಲ್ಲಿಯೇ ಈ ಗೀತೆಗಳು ಸೇರಿಕೊಂಡವು. ಬಹುತೇಕ ಹಾಡುಗಳು ಆಟದ ಅಂಗವಾಗಿಯೇ ಬರುತ್ತವೆ. ತನ್ನ ಸುತ್ತಲಿನ ವಾತಾವರಣದ ಮೇಲೆ ಪ್ರಭುತ್ವ ಸಾಧಿಸುವ ಯತ್ನದೊಂದಿಗೆ

ತನ್ನ ಸುತ್ತಲಿನ ಜಗತ್ತನ್ನು ನೋಡುವುದರಿಂದ, ಕೇಳುವುದರಿಂದ, ಸ್ಪರ್ಶಿಸುವುದರಿಂದ ಮಗುವು ತಿಳಿದುಕೊಳ್ಳಲು ಪ್ರಯತ್ನಿಸುತ್ತದೆ. ತನಗೆ ಅರ್ಥವಾಗದ ಸಂಗತಿಗಳನ್ನು ಕುರಿತು ಮಗು 'ಏಕೆ' ಹೇಗೆ ಎಂದು ಹಿರಿಯರನ್ನು ಪ್ರಶ್ನಿಸುತ್ತದೆ. ಮಕ್ಕಳಿಗೆ ಕುತೂಹಲಕಾರಿಯಾದ ವಸ್ತುವನ್ನು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಅವರು ಮೆಚ್ಚುವ ರೀತಿಯಲ್ಲಿ ಈ ಗೀತೆಗಳಲ್ಲಿ ನಿರೂಪಿಸಲಾಗಿದೆ. ಇಂತಹ ಗೀತೆಗಳ ಮೂಲಕ ಮಗುವಿಗೆ ಆಟ ಮತ್ತು ಮನರಂಜನೆಯನ್ನು ಏಕಕಾಲಕ್ಕೆ ಒದಗಿಸಬಹುದು. ಇಂತಹ ಪ್ರಾಸಗಳ ಮೂಲಕ ಮಕ್ಕಳ ಮನಸ್ಸನ್ನು ಪ್ರಕೃತಿಯಲ್ಲಿನ ವಿವಿಧ ವಸ್ತುಗಳ ಕಡೆಗೆ ಗಮನಹರಿಸುವಂತೆ ಮಾಡಲು ಸಾಧ್ಯ.

"ಎಲ್ಲಾ ಜಾತಿಗಳಲ್ಲೂ ಮಕ್ಕಳ ಸಾಹಿತ್ಯವೆಂಬುದು ಇದ್ದೇ ಇರುತ್ತದೆ. ಲಿಪಿ, ಶಿಷ್ಟ ಸಾಹಿತ್ಯಗಳಿರುವ ಹಿರಿಯ ಭಾಷೆಗಳಲ್ಲಿ ಮಾತ್ರವೇ ಅಲ್ಲ. ಆ ಸೌಕರ್ಯಗಳಿಲ್ಲದ ಆಡು ನುಡಿಗಳಲ್ಲೂ ಶಿಶುಸಾಹಿತ್ಯವೆಂಬುದು ಇದ್ದೇ ಇರುತ್ತದೆ".–ತುಳು ಬದುಕು – ಅಮೃತ ಸೋಮೇಶ್ವರ.

ದಕ್ಷಿಣ ಕನ್ನಡದ ಶಿಶುಗೀತೆಗಳು ಎಂಬ ಎಂ.ಫಿಲ್. ಪ್ರಬಂಧದಲ್ಲಿ "ನಮ್ಮ ನಾಡಿನಲ್ಲೂ ಶಿಶುಗೀತೆಗಳ ಸ್ವರ ಕೇಳಿಸಿದ್ದು ಮೊದಲು ಪಾಠಶಾಲೆಗಳಲ್ಲಿ, ಆದ್ದರಿಂದ ಸಿಗುವ ಶಿಶುಗೀತೆಗಳೆಲ್ಲವೂ ಪಾಠಾವಳಿಗಳದ್ದೇ ಆಗಿದೆ" ಎಂಬ ಭಾರತೀ ದೇವಿ ಎಂ. ಅವರ ಮಾತನ್ನು ಒಪ್ಪಲಾಗುವುದಿಲ್ಲ. ಅವರು ಜಾನಪದದ ಕಡೆಗೆ ಸ್ವಲ್ಪ ಗಮನ ಹರಿಸಿದ್ದರೆ ತುಳುವಿನಲ್ಲಿ ಅಸಂಖ್ಯ ಶಿಶುಗೀತೆಗಳಿರುವ ವಿಷಯವನ್ನು ಅರಿಯಬಹುದಿತ್ತು. ಅಲ್ಲದೆ ಕನ್ನಡದಲ್ಲೂ ಇಂತಹ ಶಿಶುಪ್ರಾಸಗಳಿವೆ.

ಉದಾ : ಮಗು ಮಗು ಪಾಠ ಓದು
ಯಾವ ಪಾಠ ಕೃಷ್ಣ ಪಾಠ
ಯಾವ ಕೃಷ್ಣ ಬಾಲಕೃಷ್ಣ
ಯಾವ ಬಾಲ ಕುದುರೆ ಬಾಲ
ಯಾವ ಕುದುರೆ ಸರ್ಕಸ್ ಕುದುರೆ
ಯಾವ ಸರ್ಕಸ್ ಕಮಲ ಸರ್ಕಸ್
ಯಾವ ಕಮಲ ಬಡ್ಡಿ ಕಮಲ
ಯಾವ ಬಡ್ಡಿ ಬ್ಯಾಂಕಿನ ಬಡ್ಡಿ
ಯಾವ ಬ್ಯಾಂಕು ಊರ ಬ್ಯಾಂಕು
ಯಾವ ಊರು ಮಂಗಳೂರು
ಯಾವ ಮಂಗ ಮರದ ಮಂಗ
ಯಾವ ಮರ ಗೋಳಿಮರ
ಯಾವ ಗೋಳಿ ಸೀತಾಂಗೋಳಿ
ಯಾವ ಸೀತ ರಾಮಸೀತಾ
ಯಾವ ರಾಮ ಸೀತಾರಾಮ
ಅಥವಾ
ಆಚೆಮನೆ ಭಟ್ರು
ಈಚೆ ಮನೆ ಸೆಟ್ರು
ಭಟ್ರು–ಸೆಟ್ರು ಕೂಡಿಕೊಂಡು
ಬಿಟ್ಟರೊಂದು ಸ್ಕೂಟ್ರು

ಇಂತಹ ಅನೇಕ ಶಿಶುಪ್ರಾಸಗಳು ಅನಾಮಧೇಯ ಜನಪದ ಕವಿಗಳಿಂದ ರಚಿತವಾಗಿದೆ. ಗೇಯಗುಣವುಳ್ಳ ಇಂತಹ ಹಾಡುಗಳನ್ನು ಮಕ್ಕಳು ಮನೆಯಲ್ಲಿಯೇ ಹಾಡುತ್ತಾರೆ.

AKSHARASURYA
Peer-Reviewed, Multi Lingual E-Journal
Volume – 01, Issue – 03, December 2022.

ಮಕ್ಕಳ ಸಾಹಿತ್ಯದ ಇಂತಹ ಶಿಶುಪ್ರಾಸಗಳ ತಂತ್ರ ತುಂಬ ಸರಳವಾದದ್ದು. ಮೃದು ವರ್ಣಗಳಿಂದ ಕೂಡಿದ್ದು, ಪಲ್ಲವಿ, ಅನುಪಲ್ಲವಿ, ಪ್ರಾಸಾನು ಪ್ರಾಸ, ಪುನಾರಾವರ್ತನೆ ಮಗುವಿನಲ್ಲಿ ನಗು ಉಕ್ಕಿಸುವ ಹಾಸ್ಯಗುಣ, ಚಮತ್ಕಾರ, ವಿವರಣಾತ್ಮಕ, ಭಾವ ಗೀತಾತ್ಮಕತೆ, ಶಿಶು ಸಾಹಿತ್ಯದ ಜೀವಾಳ. "ಭಾವ ಪ್ರಧಾನತೆ ಹಾಗೂ ಅಂತರ್ಗತವಾದ ಗೀತಗುಣಗಳಿಂದ ಶಿಶುಗೀತೆಯನ್ನು ಭಾವಗೀತೆಯ ಒಂದು ಪ್ರಕಾರವೆಂದು ಪರಿಗಣಿಸಬಹುದು. ಭಾವಗೀತೆ ಹ್ರಸ್ವವಾಗಿರಬೇಕು ಎಂಬ ಪ್ರಭು ಶಂಕರರ ಮಾತಿಗೆ ಈ ಶಿಶುಗೀತೆಗಳು ಉತ್ತಮ ಉದಾಹರಣೆಗಳು". ದಕ್ಷಿಣ ಕನ್ನಡದ ಶಿಶುಗೀತೆಗಳು, ಭಾರತೀದೇವಿ ಎಂ., ಎಂ.ಫಿಲ್. ಪ್ರಬಂಧ.

ಉದಾಹರಣೆಗೆ ಈ ಒಂದು ಶಿಶುಪ್ರಾಸವನ್ನು ಗಮನಿಸುವ:

ಕಾಡುಕೋಳಿ – ಕುಂಡಂಕೋಳಿ
ಕುಣಿಯಲು ನಾಲ್ಕು ಕಾಲು
ಕಾಡು ಮನೆಯ ಹುಡುಗಿಗೆ
ಹೇಳಲು ನಾಲ್ಕು ಬಾಯಿ
ಅಲ್ಲಿಗೆ ಹಾರಿದಳು ಗೂಬೆ
ಇಲ್ಲಿಗೆ ಹಾರಿದಳು
ಗುಂಪೆ ಕಲ್ಲಲ್ಲಿ ಕೂತಳು ಗೂಬೆ
ಏಡಿ ಹಿಡಿದಳು.

ಮಕ್ಕಳಿಗೆ ಪ್ರಾಣಿ ಪಕ್ಷಿಗಳ ಕುರಿತಾದ ಹಾಡುಗಳೆಂದರೆ ತುಂಬಾ ಹಿಗ್ಗು. ಅವರ ಪ್ರಪಂಚದಲ್ಲಿ ಅವುಗಳಿಗೂ ಮನುಷ್ಯರದೇ ಸ್ಥಾನಮಾನ. ಇಲ್ಲಿನ ಒಳ ವಿವರಗಳನ್ನು ಗಮನಿಸಿದಾಗ ಕಾಡಿನ ಪಕ್ಷಿಗಳಾದ ಕಾಡುಕೋಳಿ, ಕುಂಡಂಕೋಳಿ, ಗೂಬೆ ಇತ್ಯಾದಿಗಳನ್ನು ಮನುಷ್ಯರ ಹಾಗೆ ವರ್ಣಿಸಲಾಗಿದೆ. ಅವುಗಳನ್ನು ಯಕಃಶ್ಚಿತ್ತಾಗಿ ಕಾಣದೆ ಮನುಷ್ಯರನ್ನು ಸಂಬೋಧಿಸುವಂತೆ ಅಲ್ಲಿಗೆ ಹಾರಿದಳು, ಇಲ್ಲಿಗೆ ಹಾರಿದಳು, ಏಡಿ ಹಿಡಿದಳು ಎನ್ನುವಲ್ಲಿ ಗೂಬೆಯನ್ನು ಹೆಣ್ಣಿನ ರೀತಿಯಲ್ಲಿ ಚಿತ್ರಿಸಿದ್ದಾರೆ. ಗೂಬೆಯ ಆಹಾರ ಕ್ರಮವನ್ನು ಕೂಡಾ ಇಲ್ಲಿ ತಿಳಿಸಿದ್ದಾರೆ. ಗೂಬೆ ಆಹಾರ ಸಂಗ್ರಹಿಸುವ ರೀತಿಯನ್ನು ನಾವಿಲ್ಲಿ ಕಾಣುತ್ತೇವೆ.

ಸಂಭಾಷಣೆಯ ರೂಪದಲ್ಲಿರುವ ಹಾಡುಗಳೆಂದರೆ ಮಕ್ಕಳಿಗೆ ಇಷ್ಟ. ಈ ಕೆಳಗಿನ ಹಾಡಿನಲ್ಲಿ ಪ್ರಶ್ನೋತ್ತರದ ಧಾಟಿಯನ್ನು ಗಮನಿಸಬಹುದು.

ಕೆಂಬೂತ ಕೆಂಬೂತ ಏನ್ಮಾಡ್ತಾ ಇದ್ದೀ...?
ನಾನು ಅನ್ನ ಮಾಡ್ತಿದ್ದೇನೆ.
ಕೆಂಬೂತ ಕೆಂಬೂತ ಏನ್ಮಾಡ್ತಾ ಇದ್ದೀ...?
ನಾನು ಪದಾರ್ಥ ಮಾಡ್ತಿದ್ದೇನೆ.
ಕೆಂಬೂತ ಕೆಂಬೂತ ಏನ್ಮಾಡ್ತಾ ಇದ್ದೀ...?
ನಾನು ಸೆಗಣಿ ಸಾರಿಸ್ತಾ ಇದ್ದೇನೆ.
ಕೆಂಬೂತ ಕೆಂಬೂತ ಏನ್ಮಾಡ್ತಾ ಇದ್ದೀ...?
ನಾನು ಭತ್ತ ಬೇಯಿಸ್ತಿದ್ದೀನಿ.
ಕೆಂಬೂತ ಕೆಂಬೂತ ಏನ್ಮಾಡ್ತಾ ಇದ್ದೀ...?
ನಾನು ಭತ್ತ ಒಣಗಿಸ್ತಾ ಇದ್ದೇನೆ.
ಕೆಂಬೂತ ಕೆಂಬೂತ ಏನ್ಮಾಡ್ತಾ ಇದ್ದೀ...?
ನಾನು ಭತ್ತ ಕುಟ್ಟುತ್ತಾ ಇದ್ದೇನೆ.

ಕೆಂಬೂತ ಕೆಂಬೂತ ಏನ್ಮಾಡ್ತಾ ಇದ್ದೀ...?
ನಾನು ಮೊಟ್ಟೆ ಇಡ್ತಾ ಇದ್ದೇನೆ.
ಎಷ್ಟು ಮೊಟ್ಟೆಯಾಯಿತು?
ಒಂದಾಯಿತು
ಎಷ್ಟು ಮೊಟ್ಟೆಯಾಯಿತು?
ಎರಡಾಯಿತು.
ಎಷ್ಟು ದೊಡ್ಡ ಮೊಟ್ಟೆಯಾಯಿತು?
ಆಕಾಶದಷ್ಟು ದೊಡ್ಡದಾಯಿತು.
ನೀನು ಎಲ್ಲೋಗಿದ್ದಿ?
ನಾನು ಮದುವೆಗೆ ಹೋಗಿದ್ದೆ.
ಅಲ್ಲಿ ಏನೆಲ್ಲಾ ಇತ್ತು?
ಅಲ್ಲಿ ಲಾಡು, ಹೋಳಿಗೆ, ಜಿಲೇಬಿ, ಪಾಯಸ ಎಲ್ಲಾ ಇತ್ತು.
ನಂಗುಂಟಾ?
ನಿಂಗೆ ಕಪ್ಪು ನಾಯಿಯ ಹೇಲು
ನನ್ನ ಮೊಟ್ಟೆ ಎಲ್ಲಿದೆ?
ನಾಯಿ ಕೊಂಡು ಹೋಗಿದೆ.

ಈ ಶಿಶುಪ್ರಾಸದಲ್ಲಿ ಸಾಂಪ್ರದಾಯಿಕ ತುಳುನಾಡಿನ ಚಿತ್ರಣವನ್ನು ಗಮನಿಸಬಹುದು. ಇಲ್ಲಿ ಕೆಂಬೂತ ಅನ್ನ ಪದಾರ್ಥ ಮಾಡುತ್ತಿದೆ. ತುಳುನಾಡಿನ ಆಹಾರಕ್ರಮವನ್ನು ಇದು ಧ್ವನಿಸುತ್ತದೆ. ಸಾಂಪ್ರದಾಯಿಕ ಕೃಷಿ ಕಾರ್ಯಗಳಿರುವ ತುಳುನಾಡಿನ ಮನೆಯ ಎದುರು ಅಂಗಳಕ್ಕೆ ಸೆಗಣಿ ಸಾರಿಸಿ ನಂತರ ಭತ್ತ ಬೇಯಿಸಿ, ಸಾರಿಸಿದ ಅಂಗಳದಲ್ಲಿ ಒಣಗಲು ಹಾಕಿ ನಂತರ ಅದನ್ನು ಕುಟ್ಟಿ ಅಕ್ಕಿ ಮಾಡುವ ಸಾಂಪ್ರದಾಯಿಕ ಕ್ರಮವನ್ನು ಕಾಣಬಹುದು. ಈ ಚಿತ್ರಣವನ್ನು ಇಂದು ಕಾಣಲು ಸಾಧ್ಯವಿಲ್ಲ. ಇಂದು ಗದ್ದೆಗಳ ಸಂಖ್ಯೆ ಕಡಿಮೆಯಾಗಿದೆ. ಭತ್ತ ಕುಟ್ಟುವ ಬದಲು ಭತ್ತದ ಮಿಲ್‌ಗಳು ಆ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಕೆಂಬೂತ ಮೊಟ್ಟೆ ಇಟ್ಟು ಮದುವೆಗೆ ಹೋಗಿರುವಾಗ ಅದರ ಮೊಟ್ಟೆಯನ್ನು ಕಬಳಿಸಿ ನಾಯಿ ಕೊಂಡು ಹೋಗಿದೆ ಎನ್ನುವುದು ಮಕ್ಕಳ ತುಂಟತನವನ್ನು ತೋರಿಸುತ್ತದೆ. ಮದುವೆಯ ಚಿತ್ರಣವನ್ನು ಕಾಣಬಹುದು. ಒಂದೇ ಬಗೆಯ ನುಡಿಗಳು ಪರಿವರ್ತಿತವಾಗುವುದರಿಂದ ಮಕ್ಕಳ ಬಾಯಿಪಾಠಕ್ಕೆ ಇಂಥ ಹಾಡುಗಳು ಅನುಕೂಲವಾಗಿವೆ.

“ಮಕ್ಕಳ ಆಟದ ಹಾಡುಗಳು ಜನಪದ ಸಾಹಿತ್ಯದ ಇತರ ರೂಪಗಳಂತೆ (ರಜಟಿಡಿಜ) ಸಮುದಾಯದ ಸೃಷ್ಟಿಯಾಗಿವೆ. ಪದ ಚಮತ್ಕಾರ ಈ ಹಾಡುಗಳ ವೈಶಿಷ್ಟ್ಯ. ಸರಳವಾದ ಅರ್ಥ ಇಂಥ ಹಾಡುಗಳಲ್ಲಿ ಕಂಡುಬರುತ್ತದೆ. ಕೆಲವು ರಚನೆಗಳಂತೂ ನೇರ ಮತ್ತು ಸರಳ ಸ್ವರೂಪದ್ದಾಗಿರುತ್ತದೆ. ರಚನೆಯಲ್ಲಿ ಸಂಗತಿಗಳು ಅಸಮಂಜಸವಾಗಿದ್ದರೂ ಅದಕ್ಕೆ ಒಂದು ನಿರ್ದಿಷ್ಟ ಪರಂಪರೆ ಇರುತ್ತದೆ. ಸಾಲುಗಳು ಮಾತ್ರ ನಿರರ್ಗಳವಾಗಿ ಹರಿಯುತ್ತದೆ. ಪ್ರಾಸ ಕಡ್ಡಾಯ ಎನ್ನುವಷ್ಟರ ಮಟ್ಟಿಗೆ ಇಲ್ಲಿ ಅನಿವಾರ್ಯ. ರಂಜನೆಯೇ ಈ ಹಾಡುಗಳ ಮುಖ್ಯ ಗುರಿ.”–ಜಾನಪದ ಪರಿಶೋಧನ – ಡಾ. ಅಂಬಳಿಕೆ ಹಿರಿಯಣ್ಣ.

ಆಟದ ಹಾಡುಗಳು ಒಳ್ಳೆಯ ಕಾವ್ಯವಲ್ಲವಾದರೂ ಚಿಕ್ಕ ಮಕ್ಕಳು ಬಹಳವಾಗಿ ಪ್ರೀತಿಸುವ, ನೆನಪಿನಲ್ಲಿಟ್ಟುಕೊಳ್ಳುವ ಲಯಬದ್ಧ ರಚನೆಗಳಾಗಿವೆ. ಇವು ನಮ್ಮನ್ನು ವ್ಯಾವಹಾರಿಕ ಲೋಕದಿಂದ ಕುತೂಹಲಭರಿತ ರಮ್ಯ ಲೋಕಕ್ಕೆ ಕೊಂಡೊಯ್ಯುತ್ತವೆ. ಇವು ಮಕ್ಕಳಲ್ಲಿ ವಾಕ್ಪರಂಪರೆಯಲ್ಲಿ ಹರಿದು ಬಂದಿರುತ್ತದೆ. ಇವು ಮಕ್ಕಳಿಗೆ ಅಪಾರ ಮನರಂಜನೆಯನ್ನು ಕೊಡುತ್ತವೆ. ಕುತೂಹಲಕಾರಿ ವಸ್ತು ವಿಷಯಗಳು ಪ್ರಾಸಗಳ ನಾದ ಮಾಧುರ್ಯ ಇವುಗಳ ವೈಶಿಷ್ಟ್ಯ.

ಶೈಶಾವಸ್ಥೆಯನ್ನು ದಾಟಿದ ಮಕ್ಕಳ ಆಟದ ಹಾಡುಗಳು ಮೊದಲಿನ ಅವಸ್ಥೆಯ ಹಾಡುಗಳಿಗಿಂತ ತುಸು ಪ್ರಬುದ್ಧವಾಗಿರುತ್ತವೆ. ಅವುಗಳಲ್ಲಿ ಅಣಕ ಅಥವಾ ವಿಡಂಬನೆ ಮುಖ್ಯವಾಗಿ ಕಾಣುತ್ತದೆ. ತಮ್ಮ ಸಹಚರರೊಂದಿಗೆ ವಿರಸ ಇಲ್ಲವೆ ಆಟಗಾರರ ನಡುವಿನ ವೈಮನಸ್ಸು ಕಾರಣವಾಗುತ್ತದೆ. ಈ ರಚನೆಯ ಸೃಷ್ಟಿಯ ಹಿಂದೆ ಪ್ರಬುದ್ಧ ಮನಸ್ಸು ಇರುವಂತೆಯೂ ಕಾಣುತ್ತದೆ. ಆ ವಯಸ್ಸಿನ ಮಕ್ಕಳಿಗೆ ಅರ್ಥದ ಮೇಲಿನ ಲಕ್ಷ್ಯಕ್ಕಿಂತ ಪದದ ನಾದದ ಕಡೆಗೆ ಹೆಚ್ಚು ಲಕ್ಷ್ಯವಿರುತ್ತದೆ. ಪ್ರಾಸ ಹೊಂದಾಣಿಕೆಯಷ್ಟೇ ಮಕ್ಕಳ ಗಮನದಲ್ಲಿರುವುದು ಈ ಅಸಂಬದ್ಧತೆಗೆ ಕಾರಣ.

ಉದಾ : ಗೂಡು ಗೂಡು ಗೂಡು
ಗೂಡಿನೊಳಗೆ ಹೇಂಟೆ
ಹೇಂಟೆಯೊಳಗೆ ಮೊಟ್ಟೆ
ಮೊಟ್ಟೆಯೊಳಗೆ ಮರಿ
ಮರಿಯೊಳಗೆ ಹೇಲು
ಹೇಲಿನೊಳಗೆ ನೀನು

ಈ ಪ್ರಾಸವನ್ನು ಮಕ್ಕಳು ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ಒಬ್ಬರನ್ನೊಬ್ಬರು ದೂಷಿಸಲು ಬಳಸುತ್ತಾರೆ. ಹೆಚ್ಚಿನ ಮಕ್ಕಳ ಹಾಡುಗಳು ಆಟದ ಅಂಗವಾಗಿಯೇ ಬರುತ್ತವೆ. ಈ ಆಟದ ಹಾಡುಗಳಲ್ಲಿ ಎರಡು ಗುಂಪುಗಳು ಸೃಷ್ಟಿಯಾಗುತ್ತವೆ. ಒಂದು ಗುಂಪಿನಿಂದ ಒಬ್ಬ ಹಾಡಿದರೆ ಉಳಿದವರು ಇನ್ನೊಂದು ಗುಂಪಾಗಿ ಹಾಡುತ್ತಾರೆ. ಈ ಹಾಡುಗಳಲ್ಲಿ ಸಾಮಾನ್ಯವಾಗಿ ಎರಡು ಗುಣಗಳಿರುತ್ತವೆ. (1) ಲಯಬದ್ಧತೆ (2) ಪುನರಾವೃತ್ತಿ

ಅಳಿಲೇ ಅಳಿಲೇ ಎಲ್ಲಿಗೆ ಹೋಗುತ್ತಿದ್ದಿ ಅಳಿಲೇ
ಅಜ್ಜಿಯಲ್ಲಿಗೆ ಹೋಗ್ತೇನೆ
ಅಜ್ಜಿಯಲ್ಲಿಗೆ ಯಾಕೆ?
ಭತ್ತ ತಿನ್ನಲು
ಭತ್ತ ತಿಂದರೆ ಕಲ್ಲು ಎಸೆಯುವರು
ಕಲ್ಲೆಸೆದರೆ ಬಿಲಕ್ಕೆ ಹೋಗುವೆ
ಬಿಲದಲ್ಲಿ ಯಾರಿದ್ದಾರೆ?
ಬಿಲದಲ್ಲಿ ಅಜ್ಜಿ ಇದ್ದಾಳೆ.
ಅಜ್ಜಿಯಲ್ಲಿ ಏನಿದೆ?
ಅಜ್ಜಿಯಲ್ಲಿ ಗೆಜ್ಜೆಯಿದೆ
ಗೆಜ್ಜೆಯನ್ನು ಎಣಿಸಲು ಯಾರಿದ್ದಾರೆ?
ಗೆಜ್ಜೆಯನ್ನು ಎಣಿಸಲು ಮರಿಮಗಳು ಇದ್ದಾಳೆ
ಮರಿಮಗಳಿಗೆ ಏನಿದೆ?
ಮರಿಮಗಳಿಗೆ ದನ ಇದೆ
ದನದ ಹಾಲು ಕರೆಯಲು ಯಾರಿದ್ದಾರೆ?
ನಾನಿದ್ದೇನೆ.

ಅರ್ಥಕ್ಕೆ ಇಲ್ಲಿ ಪ್ರಾಶಸ್ತ್ಯವಿಲ್ಲ. ಅನುರಣಿತ ಧ್ವನಿ ಸರಿಯೋಜನೆಯೇ ಹಾಡಿನ ಪ್ರಧಾನ ಲಕ್ಷಣ. ಇಲ್ಲಿನ ರಚನೆ ಸಂಭಾಷಣಾತ್ಮಕವಾಗಿದೆ.

ಗ್ರಾಮಾಂತರ ಪ್ರದೇಶದ ರೈತನ ಬದುಕಿನಲ್ಲಿ ಇಂದಿಗೂ ಉಳಿದು ಬಂದಿರುವ ವಿನಿಮಯ ಪದ್ಧತಿಯನ್ನು ಮಕ್ಕಳು ಒಂದು ಶಿಶುಪ್ರಾಸದಲ್ಲಿ ಹಾಡುತ್ತಾರೆ. ಈ ಹಾಡು ಕೂಡಾ ಪ್ರಶ್ನೋತ್ತರ ಧಾಟಿಯಲ್ಲಿದೆ.

ಲಾ ಲಾ ಲಲಿತ... ಎಲ್ಲಿಯವರೆಗೆ ಓಡಿದೆ?
ಗುಡ್ಡದವರೆಗೆ ಓಡಿದೆ. ಗುಡ್ಡ ಏನು ಕೊಟ್ಟಿತು?
ಗುಡ್ಡ ಸೆಗಣಿ ಕೊಟ್ಟಿತು. ಸೆಗಣಿ ಏನು ಮಾಡಿದೆ?
ಬಾಳೆಯ ಗಿಡಕ್ಕೆ ಹಾಕಿದೆ. ಬಾಳೆ ಏನು ಕೊಟ್ಟಿತು?
ಬಾಳೆ ಗೊನೆ ಕೊಟ್ಟಿತು. ಗೊನೆ ಏನು ಮಾಡಿದೆ?
ದೇವರಿಗೆ ಇಟ್ಟೆ. ದೇವರು ಏನು ಕೊಟ್ಟರು?
ಪ್ರಸಾದ ಕೊಟ್ಟರು. ಪ್ರಸಾದ ಏನು ಮಾಡಿದೆ?
ಹಣೆಗೆ ಹಚ್ಚಿದೆ. ಹಣೆ ಏನು ಕೊಟ್ಟಿತು?
ಹೇನು ಕೊಟ್ಟಿತು. ಹೇನನು ಏನು ಮಾಡಿದೆ?
ಕೋಳಿಗೆ ಹಾಕಿದೆ. ಕೋಳಿ ಏನು ಕೊಟ್ಟಿತು?
ಮೊಟ್ಟೆ ಕೊಟ್ಟಿತು. ಮೊಟ್ಟೆ ಏನು ಮಾಡಿದೆ?
ಚುಂಯಿ ಚುಂಯಿ ಬೇಯಿಸಿ ತಿಂದೆ.

ಎಂದು ಪ್ರಶ್ನೋತ್ತರ ಮಾದರಿಯಲ್ಲಿ ಶಿಶುಪ್ರಾಸ ಬೆಳೆದುಕೊಂಡು ಹೋಗುತ್ತದೆ. ಇತರ ಕಸುಬುದಾರರು ತಮ್ಮ ಉತ್ಪನ್ನಗಳನ್ನು ರೈತನಿಗೆ ಕೊಟ್ಟು ರೈತನಿಂದ ಪ್ರತಿಯಾಗಿ ಆಹಾರ ಧಾನ್ಯಗಳನ್ನು ಪಡೆಯುವ ಸಂಪ್ರದಾಯವಿತ್ತು. ಇದು ವಸ್ತು ವಿನಿಮಯ ಪದ್ಧತಿ ಆರ್ಥಿಕ ಜೀವನ ವ್ಯವಸ್ಥೆಯನ್ನು ಹೇಳುತ್ತದೆ. ಹಣಕ್ಕೆ ಬದಲು ಆಹಾರ ಧಾನ್ಯ ಕೊಡುವ ವಿನಿಮಯ ಪದ್ಧತಿ ತುಂಬ ಹಳೆಯದು. ಈ ಮೇಲಿನ ಹಾಡು ವಸ್ತು ವಿನಿಮಯ ಪದ್ಧತಿ ಎಷ್ಟು ಜನಪ್ರಿಯವಾಗಿತ್ತು ಎಂಬುದನ್ನು ಹೇಳುತ್ತದೆ. ಕೊರೋನಾ ಲಾಕ್‌ಡೌನ್ ಕಾಲದಲ್ಲಿ ಅನೇಕ ಹಳ್ಳಿಗಳಲ್ಲಿ ವಸ್ತು ವಿನಿಮಯ ಪದ್ಧತಿ ಮತ್ತೆ ಜಾರಿಗೆ ಬಂದುದು ಗಮನಾರ್ಹ.

ಆಟದ ಹಿನ್ನೆಲೆಯಲ್ಲಿ ಮೂಡಿ ಬರುವ ಎಷ್ಟೋ ಹಾಡುಗಳು ಕೇವಲ ಒಂದೆರಡು ಚಿತ್ರಗಳನ್ನಷ್ಟೇ ಕೊಡದೆ ಕೆಲವು ವೇಳೆ ಚಿತ್ರಗಳ ಮಾಲೆಯನ್ನೇ ಕಟ್ಟುತ್ತವೆ. ತಾವು ಕಂಡ ಪ್ರಾಣಿ, ಪಕ್ಷಿ ಹಾಗೂ ವಸ್ತುಗಳ ಬಗ್ಗೆ ಮತ್ತು ತಾವು ಕೇಳಿದ ವಿಷಯಗಳ ಬಗೆಗೆ ತಮ್ಮ ಮನಸ್ಸಿಗೆ ಬಂದ ಅನಿಸಿಕೆಗಳನ್ನೇ ತುರಾತುರಿಯಾಗಿ ಹೇಳುವುದರಿಂದ ಅವರು ಪ್ರಾಸಗಳ ಮೂಲಕ ಕೊಡುವ ಚಿತ್ರಗಳಲ್ಲಿ ಒಂದು ಕ್ರಮವಾಗಲೀ ಸುಸಂಬದ್ಧತೆಯಾಗಲೀ ಕಂಡು ಬರುವುದಿಲ್ಲ.

ಓ ಹುಡುಗಿ ಶಾರದ, ಎಲ್ಲಿಯವರೆಗೆ ಹೋದಿ?
ಹಣೆಯವರೆಗೆ ಹೋದೆ, ಏನ ಎಡವಿ ಬಿದ್ದೆ
ಗ್ಲಾಸು ಎಡವಿ ಬಿದ್ದೆ, ಗ್ಲಾಸು ಏನು ಮಾಡಿದೆ?
ಬೇಲಿಗೆ ಬಿಸಾಡಿದೆ, ಬೇಲಿ ಏನು ಕೊಟ್ಟಿತು?
ಸೌದೆ ಕೊಟ್ಟಿತು, ಸೌದೆ ಏನು ಮಾಡಿದೆ?
ಒಲೆಗೆ ಇಟ್ಟೆ, ಒಲೆ ಏನು ಕೊಟ್ಟಿತು?
ಬೂದಿ ಕೊಟ್ಟಿತು, ಬೂದಿ ಏನು ಮಾಡಿದೆ?
ತೆಂಗಿನ ಬುಡಕ್ಕೆ ಹಾಕಿದೆ, ತೆಂಗಿನ ಮರ ಏನು ಕೊಟ್ಟಿತು?
ಸೀಯಾಳ ಕೊಟ್ಟಿತು, ಸೀಯಾಳ ಏನು ಮಾಡಿದೆ?
ದೇವರಿಗೆ ಇಟ್ಟೆ, ದೇವರು ಏನು ಕೊಟ್ಟ?
ಹೂ ಕೊಟ್ಟ, ಹೂ ಏನು ಮಾಡಿದೆ?
ತಲೆಗೆ ಮುಡ್ಕೊಂಡೆ, ತಲೆ ಏನು ಕೊಟ್ಟಿತು?

ಹೇನು ಕೊಟ್ಟಿತು, ಹೇನು ಏನು ಮಾಡಿದೆ?
ಕೋಳಿಗೆ ಹಾಕಿದೆ, ಕೋಳಿ ಏನು ಕೊಟ್ಟಿತು?
ಮೊಟ್ಟೆ ಕೊಟ್ಟಿತು, ಮೊಟ್ಟೆ ಏನು ಮಾಡಿದೆ?
ನಾಲ್ಕು ಮನೆಯ ಅತಿಥಿಗಳು ಬಂದಾಗ ಆಮ್ಲೆಟ್ ಮಾಡಿ ಕೊಟ್ಟೆ.

ಇಲ್ಲಿ ಪ್ರಾಸದ ಮೊದಲ ಪದ ಮತ್ತೊಮ್ಮೆ ಮುಂದಿನ ಸಾಲಿನ ಮೊದಲು ಬರುತ್ತದೆ. ಆದಿಪ್ರಾಸದ ಪದದ ಮೇಲೆ ಪ್ರಶ್ನೆಯ ಪ್ರಾಸವೇಳುತ್ತದೆ. ಇಲ್ಲಿ ಬಳಸಿರುವ ಶಬ್ದಗಳಲ್ಲಿ ಕ್ರಿಯೆ ಅಂತರ್ಗತವಾಗಿರುತ್ತದೆ. ಕ್ರಿಯೆಯ ಚಿತ್ರ ಕಣ್ಣಿಗೆ ಕಟ್ಟಿದಂತಾಗುತ್ತದೆ. ಇಲ್ಲಿನ ಚಮತ್ಕಾರದ ಉತ್ತರ ಪ್ರಾಸವನ್ನು ಮುಂದುವರಿಸುತ್ತದೆ. ಈ ರೀತಿಯ ಪ್ರಾಸಗಳನ್ನು ಒಂದೇ ಮಗು ಬೇಕಾದರೂ ಹಾಡಿಕೊಳ್ಳಬಹುದು ಅಥವಾ ಒಂದು ಮಗು ಹಾಡಿದ ಪ್ರಶ್ನೆಗೆ ಇನ್ನುಳಿದ ಮಕ್ಕಳು ಉತ್ತರಿಸಬಹುದು.

ಪಾರೆಯಲ್ಲೊಂದು ಮೊಟ್ಟೆಯಿಟ್ಟಿದ್ದೆ,
ದನ ಮೇಯಿಸೋ ಹುಡುಗರ
ತಿಥಿ ಕಳೆಯಿತು – ಟಿ.ಟಿ.ಟ್ಯೊ

ಈ ಪ್ರಾಸದಲ್ಲಿ ಟಟ್ಟಿಭ ಎನ್ನುವ ಪಕ್ಷಿಯ ಅಳಲನ್ನು ತಮ್ಮದೇ ಅಳಲು ಎಂಬಂತೆ ಜನಪದೀಯರು ಚಿತ್ರಿಸಿದ್ದಾರೆ. ಈ ಪ್ರಾಸದಿಂದ ಆ ಪಕ್ಷಿಯ ವಾಸಸ್ಥಳದ ಅರಿವು ನಮಗಾಗುತ್ತದೆ. ಸಾಮಾನ್ಯವಾಗಿ ಪಾರೆ, ಬಯಲು ಪ್ರದೇಶಗಳಲ್ಲಿ ಈ ಪಕ್ಷಿ ವಾಸಿಸುತ್ತದೆ. ದನ ಮೇಯಿಸೋ ಹುಡುಗರು ಅದರ ಮೊಟ್ಟೆಯನ್ನು ಒಡೆದು ಹಾಕಿದ್ದರಿಂದ ಅದು ಈ ರೀತಿಯಾಗಿ ಕೂಗುತ್ತದೆ. ಈ ಪ್ರಾಸದ ಮೂಲಕ ಆ ಪಕ್ಷಿಯ ವಾಸಸ್ಥಳದ ಇರವಿನ ಜೊತೆಗೆ ಅದರ ವಂಶ ನಾಶವಾಗಲು ಇರುವ ಒಂದು ಸೂಚನೆ ನಮಗೆ ಸಿಗುತ್ತವೆ. ಈ ಪ್ರಾಸ ಹಿರಿಯರು ಮಕ್ಕಳಿಗೆ ರಚಿಸಿ ಹೇಳಿದ್ದಾಗಿರಬಹುದು. ಜನಪದರು ತಮ್ಮ ರಚನೆಯಲ್ಲಿ ತಮ್ಮ ಜೀವನದ ಸಾಮಾನ್ಯ ವಸ್ತುಗಳನ್ನಿಟ್ಟುಕೊಂಡೇ ಹಾಡುಗಳನ್ನು ಹೆಣೆಯುತ್ತಾರೆ.

ಕೊಟ್ಟು ಕೊಡ್ತಲೆ ಕೊಟ್ಟು ಕೊಡ್ತಲೆ
ಮದುವೆಗೆ ಬರ್ತೀಯಾ?
ಹಾರೆಯೂ ಇಲ್ಲ ಹಿಡಿಯೂ ಇಲ್ಲ
ನಾನು ಬರುವುದಿಲ್ಲ.

ಎನ್ನುವಲ್ಲಿ ಕೊಟ್ಟು–ತಲ್ಲೆ ಎನ್ನುವುದು ಕೃಷಿ ಕೆಲಸಕ್ಕೆ ಬೇಕಾಗುವ ಹಾರೆ ಮತ್ತು ಅದರ ಹಿಡಿಯನ್ನು ಹೇಳುತ್ತದೆ. ಈ ಪ್ರಾಸವನ್ನು ಪಕ್ಷಿಯನ್ನು ಪ್ರತಿಮೆಯಾಗಿ ಕೊಟ್ಟು ಮಕ್ಕಳಿಗೆ ಕಲಿಸುತ್ತಾರೆ. ಇದರಿಂದ ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಪ್ರಾಣಿಪಕ್ಷಿಗಳ ಪರಿಚಯ ಸುಲಭವಾಗುತ್ತದೆ. 'ತುಲ್ಲೆಲ್' ಅನ್ನುವುದು ಹಿಂದುಳಿದ ಜನಾಂಗದ ಮೊಗೇರ ಸಮುದಾಯದ ಮದುವೆ. ಆ ಹಕ್ಕಿಗೆ ತಲೆಯ ಮೇಲೊಂದು ಜುಟ್ಟಿದೆ. ಹೊಟ್ಟೆ ಬಿಳಿ ಬಣ್ಣ ಮತ್ತು ಕಿತ್ತಳೆ ಬಣ್ಣವನ್ನು ಹೊಂದಿ ಹಿಂಭಾಗ ಬಾಲದ ಅಡಿ ಕೆಂಪು ಬಣ್ಣವನ್ನು ಹೊಂದಿದ ಪುಟ್ಟ ಪಕ್ಷಿ ಇದಾಗಿದೆ.

ಅಷ್ಟಮಿ ಯಾವಾಗಲೋ
ಬಾಗಿಲು ಕಾಯೋನೆ?

ಎಂದು ಮನೆಯ ನಾಯಿ ಬೆಕ್ಕಲ್ಲಿ ಕೇಳಿದಾಗ ಬೆಕ್ಕು – ನಿಂಗ್ಯಾಕೊ ಎಲೆ ನೆಕ್ಕುವವನೇ? ಎಂದು ಹೇಳುತ್ತದೆ. ಪ್ರಾಣಿ ಪಕ್ಷಿಗಳು ಮಾತನಾಡುವ ರೀತಿಯಲ್ಲಿ ಇಂತಹ ಶಿಶುಪ್ರಾಸಗಳು ಆಕರ್ಷಕವಾಗಿವೆ. ಮಕ್ಕಳು ಬೇಗ ಕಲಿತು ನೆನಪಿಟ್ಟುಕೊಳ್ಳುವಂತಹ ಪ್ರಾಸಗಳು ಇವು. ಈಗಿನ ಟಿ.ವಿ. ಚಾನೆಲ್‌ಗಳ ಕಾರ್ಟೂನ್‌ಗಳಲ್ಲಿ ಈ ರೀತಿ ಪ್ರಾಣಿ ಪಕ್ಷಿಗಳು

ಮಾತನಾಡುವಂತಹ ಸಾಹಿತ್ಯಗಳು ಇಂದಿನ ಮಕ್ಕಳಿಗೆ ಮನರಂಜನೆ ಒದಗಿಸಿದರೆ ಟಿ.ವಿ. ಇಲ್ಲದಿದ್ದಂತಹ ಕಾಲವೊಂದರಲ್ಲೇ ತುಳು ಜನಪದರು ಹಿಂದೆಯೇ ಪ್ರಾಣಿ ಪಕ್ಷಿಗಳು ಮಾತನಾಡುವಂತಹ ಶಿಶುಪ್ರಾಸಗಳನ್ನು ಹೆಣೆದಿದ್ದಾರೆ ಎನ್ನುವುದು ಗಮನಾರ್ಹವಾದುದು.

ಕೆಂಬೂತಣ್ಣ ಕೆಂಬೂತಣ್ಣ ಅಕ್ಕಿ ಕೇರುತ್ತೀಯಾ?
ಅಮ್ಮನೂ ಅಪ್ಪನೂ ಬೆತ್ತ ತಂದರು ಅಡಗಿಕೋ, ಅಡಗಿಕೋ

ಎನ್ನುವ ಪ್ರಾಸದಲ್ಲಿ ಮಕ್ಕಳಿಗೆ ತಂದೆ ತಾಯಿಯರಲ್ಲಿರುವ ಭಯವನ್ನು ನಾವು ಗಮನಿಸಬಹುದು. ಮಕ್ಕಳು ತಂಟೆಕೋರರಾಗಿದ್ದರೆ ಇಂತಹ ತಂಟೆ ಮಾಡಿ ಹೆತ್ತವರಿಗೆ ಹೆದರಿ ಅಡಗಿ ಕೂರುವುದು ಸಾಮಾನ್ಯ. ಅವರ ಮನಸ್ಥಿತಿಯನ್ನು ಹಕ್ಕಿಯೊಂದಿಗೆ ಅದೇ ರೀತಿ ಆರೋಪಿಸಿ ಹಕ್ಕಿಯೊಂದಿಗೆ ಮಕ್ಕಳು ಹಾಡುತ್ತಾರೆ.

ಕೆಂದ ಗಿಡುಗ, ನವಿಲು ಗಿಡುಗ
ಊವೆ... ಊವೆ...
ಅಟ್ಟಸನಲ್ಲ ಒಂದು ಭಾಗ
ತೆಂಗಿನಕಾಯಿ ಇದೆ
ತೆಗೀಬಾರದು
ಆಯ್ತು.
ತೆಂಗಿಗೆ ನೀರು ಹ್ಯೊದೀಯಾ?
ಕಂಗಿಗೆ ನೀರು ಹ್ಯೊದೀಯಾ?
ಬಾಳೆಗೆ ನೀರು ಹ್ಯೊದೀಯಾ?

ಎನ್ನುವ ಪ್ರಾಸದಲ್ಲಿ ಕೃಷಿ ಕುಟುಂಬದಲ್ಲಿ ಸಾಮಾನ್ಯವಾಗಿ ಕೋಳಿ ಸಾಕುತ್ತಾರೆ. ಅದರ ಮರಿಗಳನ್ನು ಗಿಡುಗಗಳಿಂದ ರಕ್ಷಿಸಲು ಗಿಡುಗಗಳು ಹಾರಾಡುವಾಗ ಊವೆ... ಊವೆ... ಅಂತ ಜೋರಾಗಿ ಬೊಬ್ಬೆ ಹೊಡೆಯುವಾಗ ಗಿಡುಗ ಹೆದರಿ ಓಡುತ್ತದೆ. ಅಲ್ಲದೆ ಕೃಷಿಕರು ತಾವು ಬೆಳೆದ ಗಿಡಗಳ ಆರೈಕೆಯನ್ನು ಮಾಡುವ ರೀತಿಯಲ್ಲಿ ಈ ಶಿಶುಪ್ರಾಸಗಳು ರಚಿತವಾಗಿದೆ. ಹೆತ್ತವರು ಮಾಡುವ ಕೆಲಸಗಳನ್ನು ನೋಡಿ ಮಕ್ಕಳು ಹಾಗೆಯೇ ಕೆಲಸವನ್ನು ಅನುಕರಿಸಿ ಕೃಷಿ ಕೆಲಸವನ್ನು ಬೇಗ ಕಲಿಯುತ್ತಾರೆ. ಹಿಂದಿನ ಕಾಲದಲ್ಲಿ ತೋಟಗಳಿಗೆ ನೀರು ಸೇದಿ ಬುಡಕ್ಕೆ ಹೊಯ್ಯಬೇಕಿತ್ತು. ಆ ಚಿತ್ರಣ ಇಲ್ಲಿದೆ.

**ಅರ್ಥವಿಲ್ಲದ ಪ್ರಾಸಗಳು:**

ಮಕ್ಕಳ ಬೌದ್ಧಿಕ ಮಟ್ಟ ಪ್ರಾಸಗಳನ್ನು ಚಮತ್ಕಾರವಾಗಿ ಹಾಡಿ ಆಡುವುದರಲ್ಲಿಯೇ ಸಾಗುತ್ತದೆ. ಈ ಹಾಡುಗಳಲ್ಲಿ ಹೆಚ್ಚು ಅರ್ಥ ಹುಡುಕಲು ಹೋಗಬಾರದು. ಅನೇಕ ಹಾಡುಗಳು ಕೇವಲ ಪ್ರಾಸದಲ್ಲಿಯೇ ಮುಕ್ತಾಯವಾಗುತ್ತದೆ. ನವುರಾದ ಗೇಲಿ, ಆಟಕ್ಕೆ ತಕ್ಕ ತಾಳಮೇಳ ಹಾಡುವಾಗ ಒದಗುವ ಖುಷಿ ಇವಷ್ಟೇ ಈ ಹಾಡುಗಳ ವೈಶಿಷ್ಟ್ಯ. ಈ ಪಾತ್ರಗಳಲ್ಲಿ ಅರ್ಥವೇ ಇರುವುದಿಲ್ಲ.

ಉದಾ. :"ಅರ್ಪರ್ ತಿರ್ಪರ್ ತೇರಿಗೆ ಪರ್ಪರ್
ತೆತ್ತಿ ಗುಂಡು ಮಡಲು"
ಅಥವಾ
ಅಪ್ಪಣ್ ಶೆಟ್ಟಿ ನಂತ್ರದ ಹೆಂಡ್ತಿ

ಅೈಕನ್ ತಡ್ವೆಲೆಡೋ
ಬೆಳ್ತಿಗೆ ಅಕ್ಕಿ, ಕೆಸರು ನೀರು
ಅೈಕನ್ ತಡ್ವೆಲೆಡೋ
ಅಥವಾ
ಆಚರಿ ಪೂಚರಿ ಕಲ್ಕಂಡೇ
ಸಂಜೆಯ ಚಹಾಕ್ಕೆ ಎಲ್ಲುಂಡೇ...

ಇತ್ಯಾದಿ ಹಾಡುಗಳಲ್ಲಿ ಯಾವುದೇ ಅರ್ಥವಿಲ್ಲ. ಇವುಗಳನ್ನು ಮಕ್ಕಳು ಪ್ರಾಸಬದ್ಧವಾಗಿ ಹಾಡುತ್ತಾರೆ.

**ಅನ್ಯಭಾಷಾ ಸಂಪರ್ಕದ ಹಾಡುಗಳು:**

ಅನ್ಯಭಾಷಾ ಮಕ್ಕಳ ಜೊತೆ ಬೆರೆತು ಆಡುವಾಗ ಆ ಭಾಷೆಯಲ್ಲಿ ರೂಢಿಯಲ್ಲಿರುವ ಪ್ರಾಸಗಳನ್ನು ಮಕ್ಕಳು ಅನುಕರಿಸುವುದು ಸಹಜ. ಮಕ್ಕಳು ಅನ್ಯಭಾಷಾ ಪ್ರಭಾವದಿಂದ ಅಪರಿಚಿತ ಭಾಷೆಯ ಹೊಸ ಪದ ಕಿವಿಯ ಮೇಲೆ ಬಿದ್ದಾಗ ಆ ಪದಗಳಿಂದ ಆಕರ್ಷಣೆಗೊಂಡು, ಜ್ಞಾಪಕದಲ್ಲಿ ಉಳಿದ ಒಂದೆರಡು ಪದಗಳನ್ನು ಕೂಡಿಸಿಕೊಂಡು ಆ ಕ್ಷಣದಲ್ಲಿ ತೋಚಿದ್ದನ್ನು ಹೇಳಿ ಬಿಡುತ್ತವೆ. ಅನ್ಯಭಾಷಾ ಪ್ರಭಾವದಿಂದ ಸೃಷ್ಟಿಯಾದ ಪ್ರಾಸಗಳನ್ನು ವಿರಳವಾಗಿ ಕಾಣಬಹುದು.

ಅಟ್ಟ ಮುಟ್ಟ ಪಾಯಿ ಪದೆಂಗಿ
ಲಾಟ್ ಲೂಟ್ ಚಲೋ...

ಅಥವಾ

ಆಚರಿ ಪೂಚರಿ ಚಟ್ಟುಂಡೆ
ಬೈಟ್‌ತ ಚಾಯೊಕು ಎಲ್ಲುಂಡೆ...

ಅಥವಾ

ಚಾಣ ಕುತ್ತಿ ಕುತ್ತಿ ಕುರುಳೇ ಕುತ್ತಕಂಡೇ...

ಅಥವಾ

ಏಕ್ ದೋನ್ ತೀನ್ ಚಾರ್ ಪಾಂಚ್ ಕಿತಾನಾ
ನೀಲಗಿರಿ ಮೈದಾನದಲ್ಲಿ
ಹೇಲು ಮಾಡಿ ಇಟ್ಟಿದ್ದೀಯಾ?

ಇಂತಹ ಪ್ರಾಸಗಳಲ್ಲಿ ಯಾವುದೇ ಅರ್ಥವಿಲ್ಲ. ಇವುಗಳನ್ನು ಮಕ್ಕಳು ಪ್ರಾಸಬದ್ಧವಾಗಿ ಹಾಡುತ್ತಾರೆ.

ಚಿಕ್ಕ ಮಕ್ಕಳಿಗೆ ತಾಯಂದಿರಿಗಿಂತಲೂ ಅಜ್ಜ-ಅಜ್ಜಿಯರಲ್ಲಿ ಹೆಚ್ಚು ಪ್ರೀತಿ. ಅವರು ಮಕ್ಕಳನ್ನು ಹತ್ತಿರ ಕೂಡಿಸಿ ಕತೆ, ಗಾದೆಗಳನ್ನು ಹಾಡುಗಳನ್ನು ಹಾಡಿ ಮಕ್ಕಳ ಮನರಂಜಿಸುತ್ತಾರೆ. ಅಜ್ಜಿಯ ಕುರಿತಾದ ಈ ಪ್ರಾಸವನ್ನು ಗಮನಿಸುವ;

ಅಜ್ಜಜ್ಜಿ ಒಂದು ಹಲಸಿನಕಾಯಿ ತೆಗೀಲಾ...
ಕೆಳಗಿನಿಂದ ಮೇಲಿನವರೆಗೆ ಮುಳ್ಳು ಹಾಕಿದ್ದೇನೆ
ಅಡಿಯಿಂದ ತೆಗೆಯಿರಿ

ಮಕ್ಕಳು ಒಬ್ಬರ ಕೈಯಲ್ಲಿ ಇನ್ನೊಂದು ಕೈಯನ್ನು ಮೇಲೆ ಮೇಲೆ ಇಟ್ಟುಕೊಳ್ಳುತ್ತಾರೆ. ಅಡಿಯಿಂದ ಹಲಸಿನ ಕಾಯಿ ತೆಗೆಯುವಾಗ ಎಲ್ಲರ ಕೈಯೂ ಕೆಳಗೆ ಬೀಳುತ್ತದೆ.

ಕಾಯನೊಟ್ಟೆ – ಕಜಕನೊಟ್ಟೆ
ಬೆಳ್ಳಿ ದೇವರ – ಗುಂಡನೊಟ್ಟೆ
ಕಾಯಾ – ಹಣ್ಣಾ?
ಹಣ್ಣು
ಬುಡದಿಂದಲಾ–ತುದಿಯಿಂದಲಾ?
ಬುಡದಿಂದ

ಅಥವಾ

ಅಕ್ಕಿ ರುಬ್ಬುತ್ತಿದ್ದಾಳೆ ಪಾತಿಮಾ
ಸುತ್ತು ಬರುತ್ತಿದ್ದಾನೆ ಮೋಂಕುರ

ಇಂತಹ ಹಾಡುಗಳನ್ನು ಮಕ್ಕಳು ಮಳೆಗಾಲದಲ್ಲಿ ಹೆಚ್ಚಾಗಿ ಹಾಡುತ್ತಾರೆ. ಮಳೆ ಬರುವಾಗ ಹೊರಗೆ ಹೋಗಿ ಆಟ ಆಡಲು ಆಗುವುದಿಲ್ಲ. ಇಂತಹ ಹಾಡುಗಳನ್ನು ಒಂದು ಕಡೆ ಕೂತು ಮಕ್ಕಳು ಆಡುತ್ತಾರೆ. "ತುಳು ಮಕ್ಕಳ ಸಾಹಿತ್ಯವನ್ನು ಸಾಕಷ್ಟು ಗುರುತಿಸಲು ಸಾಧ್ಯವಾಗುವುದಿದ್ದರೆ ಅದು ತುಳು ಜನಪದ ಸಾಹಿತ್ಯದಲ್ಲಿ ಮಾತ್ರ ಎನ್ನಬೇಕಾಗಿದೆ. ಶಾಲೆಗೆ ಹೋಗದಿರುವ ಮಕ್ಕಳ; ದನಕರು ಮೇಯಿಸುವ ಹುಡುಗರ; ಓದು ಬರಹ ಬಾರದ ತಂದೆತಾಯಿಗಳ ಬಾಯಿಯಲ್ಲಿ ಹಾಗೂ ಅವುಗಳನ್ನು ಸಂಗ್ರಹಿಸಲು ಪ್ರಯತ್ನಿಸಿರುವ ಜನಪದ ಸಾಹಿತಿಗಳ ಒಂದೆರಡು ಕೃತಿಗಳಲ್ಲಿ.

**ಅನುಕರಣ ರೂಪದ ಹಾಡುಗಳು:**

ವಯಸ್ಕರ ಗಮನ ಹರಿಯದ ಘಟನೆ ಸುದ್ದಿಗಳೆಲ್ಲವೂ ಮಕ್ಕಳ ಅನುಕರಣೆಗೆ ಒಳಗಾಗುತ್ತವೆ. ತಮಗೆ ತೋಚಿದಂತೆ ಒಂದು ಸಾಲಿಗೂ ಇನ್ನೊಂದು ಸಾಲಿಗೂ ಯಾವುದೋ ಪ್ರಾಸವನ್ನು ಸಂಬಂಧ ಕಲ್ಪಿಸಿ ಹಾಡುವುದರಲ್ಲಿ ಇವರು ನಿಪುಣರು.

ಉದಾ: ಚಿಕ್ಕ ಪ್ರಾಯದ ಬಾಲೆ ಚದುರೇ...
ನಿನ್ನಮ್ಮನ ಪರ ಕುದುರೇ...
ಎಂಬುದಾಗಿ ಮಕ್ಕಳು ಯಕ್ಷಗಾನದ ಪದವೊಂದನ್ನು ಅನುಕರಿಸುತ್ತಾರೆ.
ಯಾರೇ... ನೀನು ಚೆಲುವೇ...
ನಿನ್ನ ಅಮ್ಮ ಬಾರಿ ಮಲ್ಲ ಕಲುವೇ...

ಎನ್ನುವಲ್ಲಿ ಚಿತ್ರಗೀತೆಯೊಂದನ್ನು ಮಕ್ಕಳು ಹೇಗೆ ಅನುಕರಿಸಿದ್ದಾರೆ ಎಂಬುದನ್ನು ಗಮನಿಸಬಹುದು. ಈ ಮೂಲಕ ಶಿಶುಗೀತೆಗಳು ಕಾಲಾನುಕ್ರಮದಲ್ಲಿ ಸೃಷ್ಟಿಗೊಳ್ಳುತ್ತಲೇ ಹೋಗುತ್ತವೆ ಎಂಬುದು ಗಮನಿಸಬೇಕಾದ ಅಂಶ.

ಗಜಮುಖನೆ ಮನಕತಿಯೇ...
ನಿನಗೆ ಬಂಜನೇ...
ಬಾಕಿ ಒರಿನ ನಾಲನೆ ಎಲ್ಲೆ ಕೊರ್ಪೆನೆ

ಎನ್ನುವಲ್ಲಿ ಭಕ್ತಿಗೀತೆಯೊಂದರ ಅನುಕರಣೆಯನ್ನು ಕಾಣಬಹುದು.

AKSHARASURYA
Peer-Reviewed, Multi Lingual E-Journal
Volume – 01, Issue – 03, December 2022.

ಆಜಾನಾ ಕಡ್ಲೆ ಮನೋಲಿ
ಬಾಕಿ ಒರಿನಾ ಎಲ್ಲೆ ತಿನೋಲಿ

ಎನ್ನುವಲ್ಲಿಯೂ ಅನುಕರಣೆಯನ್ನು ಗಮನಿಸಬಹುದು. ಈ ಶಿಶುಪ್ರಾಸಗಳು ಕಾಲಾನು ಕ್ರಮದಲ್ಲಿ ಹೇಗೆ ಬದಲಾಗುತ್ತವೆ ಎಂಬುದಕ್ಕೆ ಉದಾಹರಣೆ ಇಲ್ಲಿದೆ.

ಸಾಂತಪ್ಪ ರೈ
ಕುಂಡೆಯೊಳಗೆ ಕೈ
ಕೈ ಹಾಕಿ ನೋಡಲು
ಹಳದಿ ಹಳದಿ ಜೇನು.

ಎಂಬುದಾಗಿ ಒಂದು ಶಿಶುಪ್ರಾಸವನ್ನು ಮಕ್ಕಳು ಹಾಡುತ್ತಾರೆ. ಸಾಂತಪ್ಪ ರೈ ಎಂಬವನು ಹಿಂದಿನ ಕಾಲದ ಪ್ರಸಿದ್ಧ ವ್ಯಕ್ತಿಯಾಗಿರಬಹುದು.

ಪಿರಿ ಪಿರಿ ಮಳೆಗೆ ಕೊಡೆ ಯಾಕೆ?
ಪೋಲಿಸನ ಮಂಡೆಗೆ ಟೊಪ್ಪಿ ಯಾಕೆ?
ಆಂಬುಲೆನ್ಸ್ ಇರುವಾಗ ಚಟ್ಟ ಯಾಕೆ?
ಕೂದಲಿಲ್ಲದವನ ತಲೆಗೆ ಬಾಚಣಿಗೆ ಯಾಕೆ?

ಈ ಪ್ರಾಸ ಇತ್ತೀಚೆಗಿನ ಸೃಷ್ಟಿಯಾಗಿದೆ. ಇಲ್ಲಿ ಆಂಬುಲೆನ್ಸ್, ಪೋಲೀಸ್ ಇಂತಹ ಆಧುನಿಕ ಸಮಾಜದ ವಸ್ತುಗಳ ಉಲ್ಲೇಖವಿದೆ.

**ಛೇಡಿಕೆಯ ಪ್ರಾಸಗಳು:**

ಎಲ್ಲಾ ಜಾತಿಯ ಬಗೆಗಿನ ಶಿಶುಪ್ರಾಸಗಳೂ ದೊರೆಯುತ್ತವೆ. ಮುಸ್ಲಿಂ ಜನಾಂಗದ ಬಗೆಗಿನ ಈ ಪ್ರಾಸವನ್ನು ಗಮನಿಸುವ,

ಅಲ್ಲಾಹು ಅಕ್‌ಬರ್
ಮುಂಜಾನೆ ಏಳುತ್ತೀರಿ
ಗೆಣಸು ಅಗೆಯುತ್ತೀರಿ
ಹಸಿ ಹಸಿ ತಿನ್ನುತ್ತೀರಿ

ಎನ್ನುವಲ್ಲಿ ಸ್ವಲ್ಪ ಮಟ್ಟಿನ ಲೇವಡಿಯನ್ನು ಕಾಣಬಹುದು.

ಬೋರ್ ಮಂಡೆ ಕಾಕ...
ಉಳ್ಳಾಲದ ಕೋಕ
(ಕುಪ್ಪಿ ದೊಟ್ಟೆ ಬಾಗ)

ಇಂತಹ ಪ್ರಾಸಗಳು ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ಮಾತ್ರ ಬಳಕೆಯಾಗುತ್ತಿದೆ.

ಭಟ್ರು ಮನೆಯಲ್ಲಿ ಸಾರ್ದ
ಮಕ್ಕಳು ಎಲ್ಲಾ ಹೋದ್ರು
ಪಾರೆ ಜಾರಿ ಬಿದ್ರು

ಈ ಪ್ರಾಸವು ಕೆಲವು ಕಡೆ ಈ ರೀತಿಯಾಗಿ ಬಳಕೆಯಲ್ಲಿದೆ.

ಭಟ್ಟರಲ್ಲಿ ಗಾರ್ಯ
ಮಕ್ಕಳೆಲ್ಲ ಹೋದ್ರು
ಕಾಲು ಜಾರಿ ಬಿದ್ರು

ಇದು ಕೂಡಾ ಅಣಕವಾಡುವ ಸಂದರ್ಭದಲ್ಲಿ ಉಪಯೋಗವಾಗುತ್ತದೆ.

ಭಟ್ಟ ಭಟ್ಟ ಹೂಸು ಬಿಟ್ರ
ಊರಿಗೆಲ್ಲ ನಾತ ಕೊಟ್ಟ
ಹೆಂಡತಿಯನ್ನು ಮಾರಿ ಬಿಟ್ಟ
ಹತ್ತು ರುಪಾಯಿ ದಂಡ ಕೊಟ್ಟ

ಈ ಪ್ರಾಸವನ್ನು ಛೇಡಿಕೆಯ ಸಂದರ್ಭದಲ್ಲಿ ಬಳಸುತ್ತಾರೆ.

ಅಂತೋಣಿಯ ಮನೆ ಮೇಲೆ
ಸಾಂತಿಯ ಮರ...
ಅದರ ಒಂದು ಕೆತ್ತೆ ತೆಗೆದು
ಬೆನ್ನಿಗೆರಡು ಬಾರಿಸಬೇಕು

ಅಥವಾ

ಬಾಲಕೃಷ್ಣ
ಬಾಲ ಎತ್ತಿ
ಸೆಗಣಿ ಹಾಕಿದಿಯಾ?

ಈ ಪ್ರಾಸವನ್ನು ಲೇವಡಿಗಾಗಿ ಹಾಡುತ್ತಾರೆ. ಯಾರಾದರೂ ಈ ಹೆಸರಿನವರು ಇದ್ರೆ ಇದನ್ನು ಹಾಡುತ್ತಾರೆ. ತುಳು, ಕ್ರೈಸ್ತ, ಮಲಯಾಳ, ಕನ್ನಡ ಮಾತುಗಳ ಕೊಡು-ಕೊಳೆ ಕೆಲವು ಶಿಶುಪ್ರಾಸಗಳಲ್ಲಿ ಆಗಿರುವುದು ಕಂಡು ಬರುತ್ತದೆ.

**ಶಿಶುಗಳಿಗಾಗಿ ವಯಸ್ಕ ಸೃಷ್ಟಿಯ ಪ್ರಾಸಗಳು:**

ಈ ಪ್ರಾಸಗಳು ಸಾಮಾನ್ಯವಾಗಿ ಪ್ರಾಸಬದ್ಧವಾಗಿರುತ್ತದೆ. ತಮ್ಮ ಸಂಸ್ಕೃತಿಯ ಆಶಯವನ್ನು ಹೊತ್ತು ಅರ್ಥಪೂರ್ಣವಾಗಿರುತ್ತವೆ. ಸರಳವಾದ ಉಪಮೆ ಕಲ್ಪನೆಗಳಿಮದ ಕೂಡಿದ ಶಿಶುಗಳು ಅದರಿಂದ ಬೇಗ ಆಕರ್ಷಣೆಗೊಳಗಾಗುತ್ತವೆ. ಇವುಗಳಲ್ಲಿ ಅಂದಂದಿನ ಸಾಮಾಜಿಕ ಹಾಗೂ ಸಾಂಸಾರಿಕ ಘಟನೆಗಳು ಒಳಗೊಂಡಿರುವುದನ್ನು ಕಾಣಬಹುದು.

ಡಾ. ಡಿ.ಕೆ. ರಾಜೇಂದ್ರ ಅವರು ಈ ರೀತಿಯ ಪ್ರಾಸಗಳ ಬಗ್ಗೆ ಹೀಗೆ ಹೇಳಿದ್ದಾರೆ... "ದೊಡ್ಡವರು ಈ ಬಗೆಯ ಸಾಹಿತ್ಯವನ್ನು ರಚಿಸುವಾಗ ಸಾಕಷ್ಟು ತಾಳ್ಮೆ ಬೇಕಾಗುತ್ತದೆ. ಇದೊಂದು ಬಗೆಯ ವಿಶಿಷ್ಟ ಕಸುಬು ಎನ್ನಬಹುದು. ಅವರು ತಮ್ಮ ಪಾಂಡಿತ್ಯದ ಔನತ್ಯದಿಂದ ಕೆಳಕ್ಕಿಳಿದು ಬೇರೊಂದು ಸ್ತರದಲ್ಲಿಯೇ ನಿಂತು ಈ ರಚನೆಯನ್ನು ಕೈಗೊಳ್ಳಬೇಕಾಗುತ್ತದೆ. ಇಲ್ಲಿಯೂ ಅನುಭವದ ಹಾಗೂ ವಿದ್ವತ್ತಿನ ಹಿನ್ನೆಲೆಯಿದ್ದರೂ ಅದಕ್ಕೊಂದು ಲಗಾಮನ್ನು ಹಾಕಿ ವಿಶಿಷ್ಟ ಗತಿಯಲ್ಲಿ ಅದನ್ನು ಕೊಂಡೊಯ್ಯಬೇಕಾಗುತ್ತದೆ." ಜನಪದ ಶಿಶುಪ್ರಾಸಗಳು – ಒಂದು ಸಮೀಕ್ಷೆ – ತ.ಚಿ. ಚೆಲುವೇ ಗೌಡ.

ಚಂಯಿ ಚುಯಿ ಮಾಡಿರೋ ಅಳಿಲಣ್ಣ...
ನೀನೆಲ್ಲಿ ಹುಟ್ಟಿದೆಯೋ ಅಳಿಲಣ್ಣ...
ನೀನೆಲ್ಲಿ ಬೆಳೆದೆಯೋ ಅಳಿಲಣ್ಣ...
ಮರದ ಮೇಲೆ ಹುಟ್ಟಿದೆ ಎಂದ ಅಳಿಲಣ್ಣ...
ಗೆಲ್ಲು ಗೆಲ್ಲು ಬೆಳೆದೆ ಎಂದ ಅಳಿಲಣ್ಣ...
ಏನು ಪಡೆದು ಹುಟ್ಟಿದೆಯೋ ಅಳಿಲಣ್ಣ...
ಮೂರು ಗೆರೆ ಪಡೆದು ಹುಟ್ಟಿದೆ ಎಂದ ಅಳಿಲಣ್ಣ...
ನಿನಗೇನು ತಿನ್ನಲಿಕ್ಕೆ ಅಳಿಲಣ್ಣ...
ಕಾಯಿ ಹಲಸು ತಿಂದೆನೆಂದ ಅಳಿಲಣ್ಣ...
ಕಾಯಿ ಮಾವು ತಿಂದೆನೆಂದ ಅಳಿಲಣ್ಣ...
ನೀನಾಚೆ ಹೋಗೆಲೋ ಅಳಿಲಣ್ಣ...
ನೀನೀಚೆ ಬಾರೆಲೋ ಹಾವಣ್ಣ...
ನೀನೆಲ್ಲಿ ಹುಟ್ಟಿದೆ ಎಂದ ಹಾವಣ್ಣ...
ಹಾದಿ ಹಾದಿ ಬೆಳೆದೆನೆಂದ ಹಾವಣ್ಣ...
ಏನು ಪಡೆದು ಹುಟ್ಟಿದೆಯೋ ಹಾವಣ್ಣ...
ಹೆಡೆ ಪಡೆದು ಹುಟ್ಟಿದೆ ಎಂದ ಹಾವಣ್ಣ...
ನಿನಗೇನು ತಿನ್ನಲಿಕ್ಕೆ ಹಾವಣ್ಣ...
ಕೋಳಿಮೊಟ್ಟೆ ಇಷ್ಟ ಎಂದ ಹಾವಣ್ಣ...
ನೀನಾಚೆ ಹೋಗೆಲೋ ಹಾವಣ್ಣ...
ನೀನೀಚೆ ಬಾರೆಲೋ ಹುಲಿಯಣ್ಣ
ನೀನೆಲ್ಲಿ ಹುಟ್ಟಿದೆಯೋ ಹುಲಿಯಣ್ಣ
ನೀನೆಲ್ಲಿ ಬೆಳೆದೆಯೋ ಹುಲಿಯಣ್ಣ
ಗವಿಯಲ್ಲಿ ಹುಟ್ಟಿದೆ ಎಂದ ಹುಲಿಯಣ್ಣ
ಕಾಡಿನಲ್ಲಿ ಬೆಳೆದೆ ಎಂದ ಹುಲಿಯಣ್ಣ
ಏನು ಪಡೆದು ಹುಟ್ಟಿದೆಯೋ ಹುಲಿಯಣ್ಣ
ಬಾಲ ಪಡೆದು ಬೆಳೆದೆ ಎಂದ ಹುಲಿಯಣ್ಣ
ನಿನಗೇನು ತಿನ್ನಲಿಕ್ಕೆ ಹುಲಿಯಣ್ಣ
ಕೆಂದ ಹಸು ತಿಂದೆನೆಂದ ಹುಲಿಯಣ್ಣ
ಹುಲಿಯಣ್ಣ ಹಿಡಿದಾನ; ಹುಲಿಯಣ್ಣ ಹಿಡಿದಾನ

ಪ್ರಾಣಿಗಳ ಪಾತ್ರಗಳನ್ನು ಮಕ್ಕಳಿಂದ ಅಭಿನಯಿಸುವಂತೆ ಮಾಡಲು ಈ ಹಾಡು ಒಳ್ಳೆಯ ಅಭಿನಯಗೀತವಾದೀತು. ಪ್ರಾಥಮಿಕ ಶಾಲಾ ಶಿಕ್ಷಣ ತಜ್ಞರು ಈ ಬಗೆಯ ಪದ್ಯಗಳ ಅವಶ್ಯಕತೆಯನ್ನು ಯೋಚಿಸುವ ಎಷ್ಟೋ ಮೊದಲೇ ಮಕ್ಕಳ ಹೃದಯವನ್ನರಿತ ಅನಾಮಧೇಯ ಜನಪದ ಕವಿಗಳು ಅಂಥ ರಚನೆಗಳನ್ನು ಎಷ್ಟೋ ಮಾಡಿಬಿಟ್ಟಿದ್ದಾರೆ. ಈ ಹಾಡಿನಲ್ಲಿರುವ ಪ್ರಾಣಿಗಳ ಅನನ್ಯ ಲಕ್ಷಣಗಳ ಉಲ್ಲೇಖ ಮುಂದಿನ ಹಾಡಿನಲ್ಲಿ ಪುನರಾವರ್ತನೆಯ ಇನ್ನೊಂದು ಸೊಗಸು ಮೈದೋರಿದೆ.

ಇಲ್ಲಿನ ಸಂವಾದ ಕೌತುಕಕರವಾಗಿ ಮುಂದೆ ಮುಂದೆ ಸಾಗುತ್ತಾ ಹೋಗುತ್ತದೆ. ಇಂಥಹ ಚಮತ್ಕಾರವನ್ನು ಕಲ್ಪನಾ ಬಲವಿದ್ದರೆ ಎಷ್ಟು ಉದ್ದಕ್ಕೂ ನೇಯಬಹುದು.

ತಿತ್ತಿರಿತ್ತಿರಿ ಮಜಲಿನಲ್ಲಿ ಹುಲ್ಲು ಹುಲುಸಾಗಿದೆ

ಏನು ಎಮ್ಮೆ ಏನು ಎಮ್ಮೆ ಮೇಯಲು ಹೋಗಲಿಲ್ಲ?
ನಿಮ್ಮ ಹೊಲೆಯರ ಹೈದ ಹಗ್ಗ ಕಳಚದ್ದಕ್ಕೆ ನಾನೇನ್ಮಾಡ್ಲಿ?
ಏನು ಹೈದ ಏನು ಹೈದ ಹಗ್ಗ ಕಳಚಲಿಲ್ಲ?
ನಿಮ್ಮ ಯಜಮಾನತಿ ಅನ್ನದ ತಿಳಿ ಎರೆಯದ್ದಕ್ಕೆ ನಾನೇನ್ಮಾಡ್ಲಿ?
ಏನು ಹೆಣ್ಣೆ ಏನು ಹೆಣ್ಣೆ ತಿಳಿ ಎರೆಯಲಿಲ್ಲ?
ನನ್ನ ಸಿಬ್ಬಲು ಗೆದ್ದಲು ಹಿಡಿದುದಕ್ಕೆ ನಾನೇನ್ಮಾಡ್ಲಿ?
ಯಾಕೆ ಕೋಳಿ ಯಾಕೆ ಕೋಳಿ ಗೆದ್ದಲು ಹೆಕ್ಕಲಿಲ್ಲ?
ನನ್ನ ಕೊಕ್ಕು ಮೊಂಡು ಕಟ್ಟಿದ್ದಕ್ಕೆ ನಾನೇನ್ಮಾಡ್ಲಿ?
ಏನು ಆಚಾರಿ ಏನು ಆಚಾರಿ ಕೊಕ್ಕು ಸರಿ ಮಾಡ್ಲಿಲ್ಲ?
ನನ್ನ ಉಳಿಸುತ್ತಿಗೆ ಕಳ್ಳರು ಒಯ್ದದಕ್ಕೆ ನಾನೇನ್ಮಾಡ್ಲಿ?
ಏನು ಭೂತ ಏನು ಭೂತ ಕಳ್ಳರನ್ನು ಹಿಡಿಯಲಿಲ್ಲ?
ನನಗೆ ವರ್ಷಕ್ಕೊಮ್ಮೆ ಕೊಡುವ ಕೋಲ ಕೊಡದ್ದಕ್ಕೆ ನಾನೇನ್ಮಾಡ್ಲಿ?

ಇಲ್ಲಿ ಯಜಮಾನ್ಯತೆಯ ದರ್ಪವನ್ನು ಮೆರೆಯುವ ಒಂದು ಪಾತ್ರ ಇತರ ಪಾತ್ರಗಳನ್ನು ಕೆಲಸ ಸರಿಯಾಗಿ ಮಾಡದ್ದಕ್ಕೆ ವಿಚಾರಿಸಿಕೊಳ್ಳುವ ಚಿತ್ರಣವಿದೆ. ಕೊನೆಗೆ ಈ ಎಲ್ಲಾ ತಪ್ಪುಗಳಿಗೆ ಕಾರಣ ಆತನೇ ಎಂಬುದು ಗೊತ್ತಾಗುತ್ತದೆ. ಅಲ್ಲದೆ ಈ ಹಾಡಿನ ಮೂಲಕ ತುಳುನಾಡಿನ ಬದುಕಿನ ಕ್ರಮ, ಆಳು-ಒಡೆಯರ ಸಂಬಂಧ, ವೃತ್ತಿಗಳ ಪರಿಚಯ, ಬದುಕಿನ ಕ್ರಮವನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುವುದು ಈ ಶಿಶುಪ್ರಾಸಗಳ ಉದ್ದೇಶ. ತುಳುನಾಡಿನ ಸಾಂಸ್ಕೃತಿಕ ಆರಾಧನೆಯಾದ ಭೂತಾರಾಧನೆಯ ಸಾಂಸ್ಕೃತಿಕ ವಿವರ ಈ ಹಾಡಿನಲ್ಲಿದೆ.

ಮಕ್ಕಳು ಗುಂಪಿನಲ್ಲಿ ಆಟವಾಡುತ್ತಿದ್ದಾಗ ಯಾರಾದರೂ ಹೂಸು ಬಿಟ್ಟರೆ ಅವರನ್ನು ಪತ್ತೆ ಹಚ್ಚಲು ಅನೇಕ ಪ್ರಾಸಗಳು ಬಳಕೆಯಾಗುತ್ತವೆ. ಮಕ್ಕಳ ಆಟದ ಹಾಡುಗಳಲ್ಲಿ ಎಣಿಕೆ ಪ್ರಾಸಗಳ ಪಾತ್ರ ಗಮನಾರ್ಹವಾದುದು. ಮಕ್ಕಳಿಗೆ ಎಣಿಕೆಯನ್ನು ಕಲಿಸಲು ಆಟದ ಕ್ರಿಯೆಯನ್ನು ಎಣಿಸಲು, ಆಟದಲ್ಲಿ ಸೋಲನ್ನು ನಿರ್ಣಯಿಸಲು ಇದನ್ನು ಬಳಸಲಾಗಿದೆ.

"ಅಸ್ಕಿ-ಮಸ್ಕಿ ಪಾದರ ಮೇಲೆ ಟಂಯಿ-ಟುಂಯಿ"

ಈ ಪ್ರಾಸವನ್ನು ಎಚ್ಚರಿಸುವಾಗ ಟಂಯಿ ಶಬ್ದ ಯಾರಿಗೆ ಸಲ್ಲುತ್ತದೆಯೋ, ಅವರೇ ಹೂಸಿದವರೆಂದು ನಿರ್ಧರಿಸಲಾಗುತ್ತದೆ. ತಮಗಾಗದವರಿದ್ದರೆ ಅವರಿಗೆ ಟುಂಯಿ ಶಬ್ದ ಬರುವಂತೆ ಅಕ್ರಮ ರೀತಿಯಲ್ಲಿ ಪ್ರಾಸವನ್ನು ಎಚ್ಚರಿಸುವ ಸಂದರ್ಭವೂ ಇಲ್ಲದಿಲ್ಲ.

ಆದದ್ದು ಯಾರು ಹೂಸಿದು ಯಾರು?
ಪಾಳು ಬಾವಿಗೆ ಕಲ್ಲೆಸೆದದ್ದು ಯಾರು?
ಮಗುವಿನ ಕೈಯಿಂದ ಹಣ್ಣು ಎಳೆದದ್ದು ಯಾರು?

ನನಗೂ ದೇವರಿಗೂ ಮಾತನಾಡಬಹುದು – ಎಂದು ಕೂಕುಲು ಹಾಕುತ್ತಾರೆ. ಎಲ್ಲಾ ಮಕ್ಕಳೂ ಆಗ ಮಾತನಾಡದೆ ಕೂತಿರಬೇಕು. ಯಾರಾದರೂ ಮಾತನಾಡಿದರೆ ಅಥವಾ ನಕ್ಕರೆ ಅವರನ್ನೇ ಹೂಸಿದವರೆಂದು ನಿರ್ಧರಿಸಲಾಗುತ್ತದೆ. ಮಕ್ಕಳು ಚೆಲ್ಲಾಟ, ತುಂಟಾಟದಿಂದ ಕೂಡಿದವರಾದ್ದರಿಂದ ಗಂಭೀರತೆ ಅವರ ಕಡೆ ಸುಳಿಯುವುದೇ ಇಲ್ಲ. ಈ ಎಲ್ಲಾ ವಿಷಯಗಳನ್ನೂ ಅವರು ಸಂತೋಷವಾಗಿಯೇ ಸ್ವೀಕರಿಸುತ್ತಾರೆ.

**ಮಳೆಯ ಕುರಿತಾದ ಹಾಡು:**

ಬಾರೋ ಮಳೆ ಬಾರೋ
ಮೂಡು ದಿಕ್ಕಿನ ಮಕ್ಕಳಿಗೆ
ಕುಂಡೆ ತೊಳೆಯಲು ನೀರಿಲ್ಲ

ಎಂದು ಮಕ್ಕಳು ಮಳೆಯ ಆಗಮನಕ್ಕೆ ಕಾತರದಿಂದ ಕಾಯುತ್ತಾರೆ.

ಮಳೆ ಬಂತೋ ಮಳೆರಾಯ
ಕೊಡೆ ಬಿಡಿಸೋ ಸುಬ್ರಾಯ

ಮಕ್ಕಳಿಗೆ ಮಳೆ ಎಂದರೆ ತುಂಬಾ ಇಷ್ಟ. ಮಳೆಯಲ್ಲಿ ನೆನೆಯದ ಹಾಗೆ ಅವರನ್ನು ತಪ್ಪಿಸುವುದೇ ತಾಯಿಗೆ ಒಂದು ದೊಡ್ಡ ಕೆಲಸ. ಮಳೆ ಹನಿ ಹನಿಯಾಗಿ ಬೀಳುತ್ತಿದ್ದಾಗ ಅವರನ್ನು ತಡೆಯುವವರೇ ಇಲ್ಲ. ಸಂತೋಷವಾಗಿ ಈ ಹಾಡನ್ನು ಹಾಡುತ್ತಾ ಕುಣಿಯುತ್ತಾರೆ.

ಮಾವು ರಾಜಾ ಮಹಾರಾಜಾ
ನಂಗೊಂದು ಮಾವು ಹಾಕು
ನಿಂಗೊಂದು ಹೆಣ್ಣು ಕೊಡ್ತೇನೆ

ಈ ಪ್ರಾಸವನ್ನು ಮಾವಿನಕಾಯಿ (ಹಣ್ಣು) ಹೆಕ್ಕಲು ಹೋಗುವಾಗ ಮಾವು ಬಿದ್ದಿರದಿದ್ದರೆ ಈ ಪ್ರಾಸವನ್ನು ಹೇಳುತ್ತಾರೆ. ಒಂದು ವೇಳೆ ಗಾಳಿ ಬಂದು ಮಾವಿನ ಹಣ್ಣು ಬಿದ್ದರೂ ಮಕ್ಕಳೂ ಮಾವುರಾಜನೇ ಹಣ್ಣು ಕೊಟ್ಟ ಎಂದು ಸಂತೋಷ ಪಡುತ್ತಾರೆ.

ಹೇಮ ಮಾಲಿನಿ – ಮಾವು ಬಿತ್ತು
ಮಾವು ಹೆಕ್ಕಲು ಹೋದಾಗ ಚಡ್ಡಿ ಜಾರಿತು
ಚಡ್ಡಿ ಹೆಕ್ಕಲು ಹೋದಾಗ ನಾಯಿ ಕೊಂಡೊಯ್ಯಿತು.

ಈ ಪ್ರಾಸವನ್ನು ಲೇವಡಿಗಾಗಿ ಹಾಡುತ್ತಾರೆ.

"ಅಪ್ಪಿ–ಕುಪ್ಪಿ ಸೋಡದ ಕುಪ್ಪಿ
ತೊಳೆಯಲು ಹೋದಾಗ ತೂತಾದ ಕುಪ್ಪಿ"

ಹೆಚ್ಚಾಗಿ ಮಕ್ಕಳ ಹಾಡುಗಳಲ್ಲಿ, ಜೋಗುಳ ಅಥವಾ ಶಿಶುಪ್ರಾಸಗಳಲ್ಲಿ ಒಂದೇ ರೀತಿಯ ಶಬ್ದಗಳು ಇರುತ್ತವೆ. ಅವು ಪ್ರತಿಬಾರಿಯೂ ಪ್ರಾಸವಾಗಿ ಮುಂದುವರಿಯುತ್ತದೆ. ಈ ಹಾಡುಗಳಲ್ಲಿ ಪ್ರಾಸ ಅಗತ್ಯವಾಗಿ ಇರಬೇಕಾದ್ದು. ಇಂತಹ ಹಾಡುಗಳಲ್ಲಿ ಪ್ರಾಸಕ್ಕೆ ಸರಿಯಾಗಿ ಅರ್ಥ ಹುಡುಕಬೇಕೇ ಹೊರತು ಅರ್ಥಕ್ಕೆ ಸರಿಯಾಗಿ ಶಬ್ದಗಳನ್ನು ಹುಡುಕುವುದಲ್ಲ. ಪ್ರಾಸಗಳಿಗಾಗಿಯೇ ಅವು ಹೆಣೆದು ಬಂದವುಗಳು.

ಮಕ್ಕಳು ಕತೆ ಹೇಳಲು ಒತ್ತಾಯಿಸುತ್ತಾ ಇದ್ದರೆ ಅವರನ್ನು ಈ ಪ್ರಾಸವನ್ನು ಹೇಳಿ ಬಾಯಿ ಮುಚ್ಚಿಸಲಾಗುತ್ತದೆ.

ಕತೆ ಕತೆ ಕಲ್ಪಟೆ
ನಿನ್ನಮ್ಮನ ಪೀಪಟೆ

ಅಥವಾ

ಕತೆ ಕತೆ ಕಾರಣ – ಬಿಕ್ಕೀರಾನ್
ಒಂದುವರೆ ಪಲ್ಲಯಿ ತಿಂದಿಯ ಮುಂಡೆ
ಮಲಗು, ಮಲಗು, ಮಲಗು

ಎಂದು ತಾಯಿ ಅಥವಾ ಅಜ್ಜಿ ಗದರುತ್ತಾರೆ. ಮಕ್ಕಳು ಸುಮ್ಮನಾಗುತ್ತವೆ. ಚಿಕ್ಕ ಮಕ್ಕಳು ಹಟ ಮಾಡುತ್ತಿದ್ದರೆ ಅವರನ್ನು ಈ ಪ್ರಾಸವನ್ನು ಹಾಡಿ ಸಮಾಧಾನ ಮಾಡುತ್ತಾರೆ.

ತಾಯಿ ತಾಯಿ ತಮ್ಮಾನ
ಬೆಲ್ಲದ ತಿಂಡಿ ಬಿಸಿ ಬಿಸಿ
ಮಕ್ಕಳು ಎಲ್ಲಿ ಓಡಿದು
ತಡಮೆ ಹಾದು ಬಿದ್ರು

ಈ ಪ್ರಾಸವನ್ನು ಕೇಳಿ ಮಕ್ಕಳು ಹಟ ಮರೆತು ನಗುತ್ತಾರೆ. ಕೆಳಗಿನ ಹಾಡನ್ನು ಕೂಡಾ ಮಕ್ಕಳನ್ನು ಸಮಧಾನಿಸಲು ಹೇಳುತ್ತಾರೆ.

ಆರು ಮೂರು ಮಲ್ಲಿಗೆ
ಮಲ್ಲಿಗೆ ಮೇಲೆ ಮಂಚ
ಎಲ್ಲಿಗೆ ಹೋಗ್ತೀರಿ ಹಕ್ಕಿಗಳೆ…
ಕಾಸರಗೋಡಿಗೆ ಹೋಗ್ತೇನೆ…
ದಿಬ್ಬಣವೊಂದು ಬರ್ಬೇಕು
ಚೆನ್ನಾದ ಹೆಣ್ಣು
ದೀಪದಲ್ಲಿ ಎಣ್ಣೆ ಎಳೆಯುತ್ತಾ ಇದೆ
ತೆಂಗಿನ ಮರದಲಿ ನರಿ
ಒಲೆಯಲಿ ಕಳ್ಳ

ಮಕ್ಕಳು ಈ ಪ್ರಾಸವನ್ನು ಹಾಡಿ ಖುಷಿ ಪಡುತ್ತಾರೆ.

ಆನೆಯೂ ಸೀನೆಯೂ ಬಲ್ಲಾಗೆ…
ಕೋಳಿಯ ಗೂಡು ಕುಂಞಕ್ಕನಿಗೆ
ದಟ್ಟಿಗೆ ದಂಡಿಗೆ ದೇವರಿಗೆ
ಆನೆ ಬರುವುದು ಆನೆಕಲ್ಲಿಂದಾಗಿ
ಬೆಕ್ಕು ಬರುತ್ತದೆ ಪುತ್ತೂರಿನಿಂದ
ನಾಯಿ ಬರುತ್ತದೆ ನಾಕೂರಿನಿಂದ
ಕೋಳಿ ಬರುತ್ತದೆ ಕೋಳಿರುವಿನಿಂದ

ಈ ಪ್ರಾಸವನ್ನು ಚಿಕ್ಕ ಮಕ್ಕಳನ್ನು ಸಮಾಧಾನ ಪಡಿಸಲು ಹಾಡುತ್ತಾರೆ. ಅವರವರ ಅಂತಸ್ತಿಗೆ ತಕ್ಕಂತಹ ಗುಣಗಳನ್ನು ಇಲ್ಲಿ ಕಾಣಬಹುದು. ಬಲ್ಲಾಳರಿಗೆ ಆನೆ ಮುಂತಾದ ವೆಚ್ಚದಾಯಕವಾದ ಪ್ರಾಣಿಗಳು ಇದ್ದರೆ ಕೋಳಿಯ ಗೂಡು ಸಾಮಾನ್ಯಳಾದ ಕುಂಞಕ್ಕನಿಗೆ ದೇವರಿಗೆ ದಂಡಿಗೆ; ಆನೆ ಆನೆಕಲ್ಲಿನಿಂದಾಗಿ ಬಂದರೆ ಕುದುರೆ ಕುದ್ರೆಡಿ ಎನ್ನುವ ಊರಿನಿಂದಾಗಿ ಬರುತ್ತದೆ. ಬೆಕ್ಕು ಪುತ್ತೂರಿನಿಂದ ಈ ರೀತಿ ಪ್ರಾಣಿಗಳ ಹೆಸರಿಗೆ ಅನುಸಾರವಾಗಿ ಊರಿನ ಹೆಸರುಗಳು ಬೆಳೆದು ಬಂದಿವೆ. ಚಿಕ್ಕ ಮಕ್ಕಳು ಇಂತಹ ಹಾಡುಗಳನ್ನು ಹಾಡುವುದರಿಂದ ವಿವಿಧ ಪ್ರಾಣಿಗಳ ಪರಿಚಯ ಚಿಕ್ಕಂದಿನಲ್ಲೇ ಆಗುತ್ತದೆ.

ಇಂದಿನ ಆಧುನಿಕ ಸಮಾಜದಲ್ಲಿ ಶಿಶುವಿಹಾರ ಇತ್ಯಾದಿಗಳಿಗೆ ಚಿಕ್ಕ ಮಕ್ಕಳನ್ನು ಕಳಿಸುವುದರಿಂದ ಸಾಂಪ್ರದಾಯಿಕವಾಗಿ ಬಂದಿರುವ ಇಂತಹ ಶಿಶುಪ್ರಾಸಗಳಿಂದ ಈಗಿನ ಮಕ್ಕಳು ವಂಚಿತರಾಗುತ್ತಿದ್ದಾರೆ. ಹೆತ್ತವರು ಕೆಲಸಕ್ಕೆ ಹೋಗುವ ಇಂದಿನ ಸನ್ನಿವೇಶದಲ್ಲಿ ಸಮಯದ ಅಭಾವದಿಂದ ಮಕ್ಕಳಿಗೆ ಇಂತಹ ಹಾಡುಗಳನ್ನು ಹೇಳಿಕೊಡಲು ಹೆತ್ತವರಿಗೆ ಪುರುಸೊತ್ತಿಲ್ಲ. ಶಿಶುವಿಹಾರಗಳಲ್ಲೂ ಮಕ್ಕಳು ಸ್ವೇಚ್ಛೆಯಾಗಿ ಹಾಡಿಕೊಂಡು ಆಡಿಕೊಳ್ಳುವಂತೆ ಅವಕಾಶ ಕಲ್ಪಿಸಬೇಕು. ಶಿಷ್ಟತೆಯ ನೆಪ ಹೊಡೆದು ಜನಪದ ಶಿಶುಪ್ರಾಸಗಳನ್ನು ತಿರಸ್ಕರಿಸದೆ ವಾತ್ಸಲ್ಯ, ಸಾಂಸಾರಿಕ ಜನಪದ ಅನುಕರಣ ಸಂಬಂಧಿಯಾದ ಆಟಗಳಿಗೆ ಅವಕಾಶ ಮಾಡಿಕೊಡಬೇಕು.

ಶಿಶು ಗೀತೆಗಳು ಮಕ್ಕಳ ಎಳೆಯ ಜೀವನವನ್ನು ರಸಮಯವಾಗಿ, ಸಂತೋಷಮಯವಾಗಿ ಮಾಡುವವು. ಕ್ರಿಯಾಶಕ್ತಿಯನ್ನು ಹೆಚ್ಚಿಸುವವು. ವಿನೋದದೊಡನೆ, ಆಟಗಳೊಡನೆ, ಲೋಕಾನುಭವವನ್ನು ಜಾಗೃತಗೊಳಿಸುವವು. ಅಂಗಾಂಗಗಳಿಗೆ ವ್ಯಾಯಾಮವನ್ನಿತ್ತು ದೈಹಿಕ ಸಮತೋಲನ ಸ್ಥಿರತೆಗಳನ್ನು ಉಂಟು ಮಾಡುವುವು. ಪರಸ್ಪರ ಪ್ರೀತಿ ವಾತ್ಸಲ್ಯಗಳನ್ನು ಬೆಳೆಸುವವು.

ಒಟ್ಟಿನಲ್ಲಿ; ತುಳುವಿನಲ್ಲಿ ಮಕ್ಕಳ ಸಾಹಿತ್ಯ ರಚನೆಗೆ ವಿಪುಲ ಅವಕಾಶವಿದೆ. ಕಾರಣ ತುಳು ಭಾಷೆಗಿರುವ ಮೌಖಿಕ ಮತ್ತು ಪ್ರಾದೇಶಿಕ ವ್ಯಾಪ್ತಿ ಬಹು ದೊಡ್ಡದು. ಕರಾವಳಿ ಕರ್ನಾಟಕದಲ್ಲಿ ಬಹುಭಾಷಾ ಮತ್ತು ಬಹುಧರ್ಮ ಸಂಸ್ಕೃತಿಗಳ ಜೊತೆ ಹಾಸುಹೊಕ್ಕಾಗಿ ಸಾಗಿ ಬಂದಿದೆ. ಮುಸ್ಲಿಂ, ಕ್ರೈಸ್ತ ಮೊದಲಾದ ಅನ್ಯಧರ್ಮಗಳ ಬದುಕು, ಭಾಷೆಗಳ ಪ್ರಭಾವ ತುಳುವಿನ ಮೇಲೆ ಸಾಕಷ್ಟು ಆಗಿವೆ. ಆಟದ ಪದ್ಯಗಳಲ್ಲಿ ಸೇರಿರುವ ಪರಂಪರಾಗತ ನಂಬಿಕೆಗಳು ನಮ್ಮ ಸಂಸ್ಕೃತಿಯ ಸ್ವರೂಪವನ್ನು ತಿಳಿಯಲು ಮತ್ತು ಮಕ್ಕಳ ಮನಸ್ಸಿನ ಕುತೂಹಲಕಾರಿ ಅಧ್ಯಯನಕ್ಕೆ ಮುಖ್ಯ ಸಾಮಾಗ್ರಿ ಎನಿಸಿದೆ.

**AKSHARASURYA**
Peer-Reviewed, Multi Lingual E-Journal
Volume – 01, Issue – 03, December 2022.

**ಪರಾಮರ್ಶನ ಗ್ರಂಥಗಳು**

1. ತುಳು ಬದುಕು – 1984, ಅಮೃತ ಸೋಮೇಶ್ವರ, ಪ್ರಕೃತಿ ಪ್ರಕಾಶನ, ಕೋಟೆಕ್ಕಾರು
2. ಪೊಲಿ 200 – 2001 (ಸಂ.) ಪ್ರಭು ಎಂ. ಮುಕುಂದ
3. ಮುಂಗೋಳಿ – 1983. ತ.ಚಿ. ಚೆಲುವೇಗೌಡ, ತಳಗವಾದಿ ಪ್ರಕಾಶನ ಕುವೆಂಪು ನಗರ, ಮೈಸೂರು – 570 009
4. ಜಾನಪದ ಪರಿಶೋಧನ – ಡಾ. ಅಂಬಳಿಕೆ ಹಿರಿಯಣ್ಣ
5. ಜಾನಪದ ಕೆಲವು ಅಧ್ಯಯನಗಳು – 1994, ಡಾ. ಅಂಬಳಿಕೆ ಹಿರಿಯಣ್ಣ, ಬೆಂಗಳೂರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
6. ಕನ್ನಡ ಜಾನಪದ ವಿಶ್ವಕೋಶ – ಸಂಪುಟ (2) (ಸಂ) ಚಂದ್ರಶೇಖರ ಕಂಬಾರ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು
7. ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು – ವಿದ್ವಾನ್ ಟಿ. ಕೇಶವ ಭಟ್ಟ ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018
8. ತುಳು ಜನಪದ ಸಾಹಿತ್ಯ – 1985, ಡಾ. ಬಿ.ಎ. ವಿವೇಕ ರೈ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 18

## ಅನುಬಂಧ

### ತುಳು ಮೂಲ ಪದ್ಯಗಳು

1) ಕಾಟ್ ಕೋರಿ ಕುಂಡಂಕೋರಿ
ನಲಿಪೆರೆ ನಾಲ್ ಕಾರ್
ಕಾಟಿಲ್ಲದ ಪೊನ್ನ ಮನೆಕ್
ಪನಿಯೆರೆ ನಾಲ್ ಬಾಯಿ
ಆಡೆಗ್ ರಾಯಲ್ ಗೂಮೆ
ಈಡೆಗ್ ರಾಯಲ್ ಗುಂಪೆ
ಕಲ್ಲ್‌ಟ್ ಕುಲ್ಯಲ್ ಗೂಮೆ
ಡೆಂಜಿಗ್ ಮುಟ್ಯಾಲ್

2) ಕುಪ್ಲೊಪ್ಲೊ ದಾನೆನ್‌ಪುವ?
ಯಾನ್ ಗಂಜಡ್ವೆ
ಕುಪ್ಲೊಪ್ಲೊ ಈ ದಾನೆನ್‌ಪುವ?
ಯಾನ್ ಕಜಿಪನ್ನುವೆ
ಕುಪ್ಲೊಪ್ಲೊ ಈ ದಾನೆನ್‌ಪುವ?
ಯಾನ್ ಅಂಜಿ ಅಡಿಪುವೆ
ಕುಪ್ಲೊಪ್ಲೊ ಈ ದಾನೆನ್‌ಪುವ?
ಯಾನ್ ಬಾರ್ ವೈಪಾವೆ
ಕುಪ್ಲೊಪ್ಲೊ ಈ ದಾನೆನ್‌ಪುವ?
ಯಾನ್ ಬಾರ್ ನುಂಗಾವೆ
ಕುಪ್ಲೊಪ್ಲೊ ಈ ದಾನೆನ್‌ಪುವ?
ಯಾನ್ ಬಾರ್ ಎಡ್ಪುವೆ
ಕುಪ್ಲೊಪ್ಲೊ ಈ ದಾನೆನ್‌ಪುವ?
ಯಾನ್ ಕೆತ್ತಿಡ್ವೆ
ಯೇತ್ ಕೆತ್ತಿಯಾಂಡ್?
ಒಂಜಾಂಡ್
ಯೇತ್ ಕೆತ್ತಿಯಾಂಡ್?
ರಡ್ಡಾಂಡ್
ಯೇತ್ ಮಲ್ಯ ಕೆತ್ಯಾಂಡ್
ಬಾನದಾತ್ ಮಲ್ಲಾಂಡ್
ಈ ಓಡೆದೀತ್ತ?
ಯಾನ್ ಮದ್ಮೆಗೋದಿತ್ತೆ
ಅವುಲು ದಾಯ್ತ ಮಾತ ಇತ್ತ್ಂಡ್
ಅವುಲು ಲಾಡ್, ಹೋಳಿಗೆ, ಜಿಲೇಬಿ, ಪಾಯಸ ಪೂರ ಇತ್ತ್ಂಡ್
ಯೆಂಕುಂಡ?
ನಿಕ್ಕ ಕರಿಯ ನಾಯಿದ ಪೀ
ಯೆನ್ನ ಕೆತ್ತಿಯೋಂಡು?

ನಾಯಿ ಕೊಂಡೊತ್ತ್‌ಂಡ್

3) ಗೂಡು ಗೂಡು ಗೂಡು
ಗೂಡುದುಲಯಿ ಪೆರಡೆ
ಪೆರಡೆದುಲಯಿ ತೆತ್ತಿ
ತೆತ್ತಿದುಲಯಿ ಕಿನ್ನಿ
ಕಿನ್ನಿದುಲಯಿ ಪೀ
ಪೀ ತುಲಯಿ ಈ

4) ಕುಂಡಚ ಕುಂಡಚ ಓಡೆಪೋಪ ಕುಂಡಚ
ಅಜ್ಜಿನಾಡೆ ಪೋಪೆ
ಅಜ್ಜಿನಾಡೆ ದಾಯೆ
ಬಾರ್ ಕೊಜಿತಿರೆ
ಬಾರ್ ಕೊಜಿಲ್‌ಂಡ ಕಲ್ಲ್ ದಕ್ಕೆರ್
ಕಲ್ಲ್ ದಕ್ಕ್‌ಂಡ ಕುಡೆಕ್ ಪೊಗ್ಗುವೆ
ಕುಡೆಟ್ ಏರ್ ಉಲ್ಲೆರ್
ಕುಡೆಟ್ ಅಜ್ಜಿ ಉಲ್ಲಲ್
ಅಜ್ಜಿಡ ದಾನೆಂಡು
ಅಜ್ಜಿಡ ಗೆಜ್ಜೆಂಡು
ಗೆಜ್ಜೆನ್ ಗೆನಿಪೆರೆ ಏರುಲ್ಲೆರ್
ಗೆಜ್ಜೆನ್ ಗೆನಿಪೆರೆ ಪುಲ್ಲಿ ಉಲ್ಲಲ್
ಪುಲ್ಲಿಗ್ ದಾದ ಉಂಡು?
ಪುಲ್ಲಿಗ್ ಪೆತ್ತ ಉಂಡು
ಪೆತ್ತನ್ ಬೊರಿಯೆರೆ ಏರುಲ್ಲೆರ್
ಯಾನುಲ್ಲೆ

5) ಲಾ ಲಾ ಲಲಿತ... ಓಡೆ ಮುಟ್ಟ ಬಲಿತ
ಗುಡ್ಡೆ ಮುಟ್ಟ ಬಲಿತೆ, ಗುಡ್ಡೆಡ್ ದಾಯ್ತ ತಿಕ್ಕ್‌ಂಡ್?
ಗುಡ್ಡೆಡ್ ಅಂಬಿ ತಿಕ್ಕ್‌ಂಡ್, ಅಂಬಿನ್ ದಾಯ್ತ ಮನ್ತ?
ಬಾರೆದ ದೈಕ್ ಪಾಡ್ಯೆ; ಬಾರೆ ದಾಯ್ತ ಕೊರ್‌ಂಡ್?
ಬಾರೆ ಕೈಲ್ ಕೊರ್‌ಂಡ್?
ಕೈಲ್‌ನ್ ದಾಯ್ತ ಮಲ್ತ?
ದೇವೆರೆಗ್ ದೀಯೆ; ದೇವೆರ್ ದಾಯ್ತ ಕೊರಿಯೆರ್?
ಪುರ್ಸದ ಕೊರ್ಯೆರ್, ಪುರ್ಸದೊನು ದಾಯ್ತ ಮಲ್ತ?
ಮುಂಡಗ್ ಪಾಡ್ಯೆ, ಮುಂಡ ದಾಯ್ತ ಕೊರ್‌ಂಡ್?
ಪೇನ್ ಕೊರ್‌ಂಡ್, ಪೇನ್‌ನ್ ದಾಯ್ತ ಮಲ್ತ?
ಕೋರಿಗ್ ಪಾಡ್ಯೆ, ಕೋರಿದಾಯ್ತ ಕೊರ್‌ಂಡ್?
ಕೆತ್ತಿ ಕೊರ್‌ಂಡ್, ಕೆತ್ತಿನ್ ದಾಯ್ತ ಮಲ್ತ?
ಚಂಯಿ ಚುಂಬಿ ವೈಪಾದ್ ತಿಂದೆ.

6) ಓ ಪೊಣ್ಣೆ ಶಾರದ – ಒಡೆಮುಟ್ಟ ಪೋಯ?
ಮುಂಡ ಮುಟ್ಟ ಪೋಯೆ ಏನ ದಂಕು ಬೂರಿಯಾ?
ಗಲಸ್ ದಂಕು ಬೂರಿಯೆ, ಗಲಸ್ ಏನ ಮನ್ತ?
ಬೇಲಿ ದರೆಯೆ, ಬೇಲಿ ಏನ ಕೊರುಂಡು?
ಕನಕ್ ಕೊರ್ಂಡ್, ಕನಕೇನ ಮನ್ತ?
ದಿಕ್ಕೆಲ್ ದೀಯೆ, ದಿಕ್ಕೆಲೇನ ಕೊರ್ಂಡ್?
ಬೊನ್ಯ ಕೊರ್ಂಡು, ಬೊನ್ಯೇನಾ ಮನ್ತ?
ತಾರೆ ಪಾಡಿಯೆ, ತಾರೆ ಏನ ಕೊರುಂಡು?
ಬೊಂಡ ಕೊರುಂಡು, ಬೊಂಡ ಏನ ಮನ್ತ?
ದೇವೆರೆ ದೀಯೆ, ದೇವೆರೇನ್ ಕೊರ್ಂಡ್?
ಪೂ ಕೊರುಂಡು, ಪೂ ಏನ್ ಮನ್ತ?
ಮಂಡೆ ಮುಡ್ತೊಂಡೆ, ಮಂಡೆ ಏನ ಕೊರ್ಂಡ್?
ಪೇನ್ ಕೊರ್ಂಡ್, ಪೇನೇನ್ ಮನ್ತ?
ಕೋರಿ ಪಾಡಿಯೆ, ಕೋರೇನ ಕೊರ್ಂಡ್?
ತೆತ್ತಿ ಕೊರ್ಂಡ್, ತೆತ್ತೇನ ಮನ್ತ?
ನಾಲಿಲ್ಲದ ಬಿನ್ನೆರ್ ಬನ್ನಗ ಆಮ್ಲೆಟ್ ಮನ್ತ್ ಪಾಡ್ಯೆ

7) ಪಾದೆಡೊಂಜಿ ಕೆತ್ತಿಡುತ್ತೆ
ಕೈಕಂಜಿ ಮೇಪಾಯಿ ಜೋಕುಲೆನ
ಸಾವರಿತ್ತ್ಂಡ್ – ಟಿ–ಟಿ–ಟ್ಯೋ

8) ಕೊಟ್ಟೊಡ್ತಲೆ ಕೊಟ್ಟೊಡ್ತಲೆ
ತುಲ್ಲೆಲ್ಗರ್ಬನಾ?
ಕೊಟ್ಟು ಅದ್ದಿ ತಲ್ಲೆಲಿದ್ದಿ
ಯಾನರುಪುಜಿ

9) ಅಪ್ಪೇ ಪ್ಯೋಪ
ಮುಟ್ಟು ಕುಡುಂಬ
ನಿಕ್ಕ್ ದಾಯೆ
ಇರೆ ನಕ್ಕೇಲಾ

10) ಕುಪ್ಪುಲಣ್ಣ, ಕುಪ್ಪುಲಣ್ಣ ಅರಿಪೊಡೆಪುಬನ
ಅಮ್ಮಲ ಅಪ್ಪಲ ಬರ್ಡು ಕಂತೆರ್ ದೆಂಕುಲ್ ದೆಂಕುಲ್

11) ಗೆಂದ ಗಿಡಿ ಮೈರ್ ಗಿಡಿ ಊವೆ... ಊವೆ...
ಅಟ್ಟಡ್ ಒಂಜಿಗಡಿ ತಾರಯಿ ಉಂಡು
ದೆಪ್ಯೆರೆ ಬಲ್ಲಿ, ಆವು
ತಾರೆಗ್ ನೀರ್ ಮೈತಾನಾ?
ಕಂಗ್‌ಗ್ ನೀರ್ ಮೈತಾನಾ?
ಬಾರೆಗ್ ನೀರ್ ಮೈತಾನಾ?

12) ಅರ್ಪರ್ ತಿರ್ಪರ್ ತೇರಿಗೆ ಪರ್ಪರ್
ತೆತ್ತಿ ಗುಂಡು ಮಡಲು

13) ಅಪ್ಪಣ್ ಶೆಟ್ಟಿ ಬೊಕ್ಕದ ಬೊಡೆದಿ
ಅೃಕನ್ ತಡ್ಪೆಲೊಡೋ...
ಅರಿ ಬೊಲಂತೆ, ನೀರ್ ಕಲಂಕ್
ಅೃಕನ್ ತಡ್ಪೆಲೆಡೋ

14) ಆಚರಿ ಪೂಚರಿ ಕಲ್ಕಂಡೇ...
ಬಯ್ಯದ ಚಾಯೊಗು ಎಲ್ಲುಂಡೆ...

15) ಅಟ್ಟ ಮುಟ್ ಪಾಯಿ ಪದೆಂಗಿ
ಲಾಟ್ ಲೂಟ್ ಚಲೊ

16) ಆಚರಿ ಪೂಚರಿ ಚಟ್ಟುಂಡೇ
ಬೈಟ್‌ತ ಚಾಯೊಕು ಎಲ್ಲುಂಡೆ

17) ಚಾಣ ಕುತ್ತಿ ಕುತ್ತಿ ಕುರುಳೆ ಕುತ್ತಕಂಡೆ

18) ಏಕ್ ದೋನ್ ತೀನ್ ಚಾರ್ ಪಾಂಚ್ ಕಿತಾನಾ..
ನೀಲಗಿರಿ ಮೈದನಡ್
ಉರ್ಚಿದಿತಾನಾ...

19) ಅಜ್ಜಜ್ಜಿ ಒಂಜಿ ಗುಜ್ಜೆ ದೆಪ್ಪೊಡೆ?
ಕಡೇಡ್ದ್ ಕೊಡಿ ಮುಳ್ಳು ಪಾಡ್ದೆ
ಅಡೀಡ್ದ್ ದೆಪ್ಪುಲೆ

20) ಕಾಯನೊಟ್ಟೆ–ಕಜಕನೊಟ್ಟೆ
ಬೊಳ್ಳಿದೇವೆರೆ ಗುಂಡೊನೊಟ್ಟೆ
ಕಾಯಾ – ಪರ್ಂದಾ
ಕಡೇಡ್ದಾ – ಕೊಡೀಡ್ದಾ
ಕಡೇಡ್ದ್

21) ಅರಿ ಕಡೆಪಲ್ ಪಾತೀಮಾ
ಬಲಿ ಬರ್ಪೆ ಪೋಂಕುರೆ

22) ಚಿಕ್ಕ ಪ್ರಾಯದ ಬಾಲೆ ಚದುರೇ...
ನಿನ್ನಮ್ಮನ ಪರ ಕುದುರೇ...

23) ಯಾರೇ... ನೀನು ಚೆಲುವೇ...
ನಿನ್ನ ಅಮ್ಮ ಬಾರಿ ಮಲ್ಲ ಕಲುವೆ

24) ಗಜಮುಖನೆ ಮನಕತಿಯೆ
ನಿನಗೆ ಬಂಜನೆ...
ಬಾಕಿ ಒರಿನ ನಾಲನೆ ಎಲ್ಲೆ ಕೊರ್ವೆನೆ

AKSHARASURYA
Peer-Reviewed, Multi Lingual E-Journal
Volume – 01, Issue – 03, December 2022.

**ಮಾಹಿತಿದಾರರ ವಿವರ**

1. ಅರ್ಚನ ಪಿ., ಪಂಜತೊಟ್ಟಿ, ಕಾಸರಗೋಡು
2. ಹರ್ಷಿತಾ ಕೆ., ಕುಂಡಕೋರಿ, ವಿಟ್ಲ
3. ಅರ್ಷಿಯ, ಬಗಂಬಿಲ, ಮಾಡೂರು
4. ವಿನೋದ, ಮಲ್ಪೆ, ಉಡುಪಿ
5. ರವಿಚಂದ್ರ, ಕಾಪಿಕಾಡು, ತೊಕ್ಕೊಟ್ಟು
6. ನಾಗರಾಜ, ಕಾಪಿಕಾಡು, ತೊಕ್ಕೊಟ್ಟು
7. ಶಶಿಕಲ, ಸಿದ್ಧಕಟ್ಟೆ, ಬಂಟ್ವಾಳ
8. ನೇತ್ರಾಕ್ಷಿ, ಕಳವಾರು, ಬಜಪೆ
9. ಶಾಲಿನಿ, ಮುಲ್ಕಿ, ಮಂಗಳೂರು
10. ಅರ್ಪಣ ಸಿ., ಪಂಜತೊಟ್ಟಿ, ಕಾಸರಗೋಡು
11. ದೀಪಾ ಸಿ.ಕೆ., ಮಂಡೆಕಾಪು, ಕಾಸರಗೋಡು
12. ಪ್ರದೀಪ್ ಸಿ.ಕೆ., ಮಂಡೆಕಾಪು, ಕಾಸರಗೋಡು